ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಅಕ್ಟೋಬರ್ 2020 ಮಾಸ ಪತ್ರಿಕೆ

ಸಂಪುಟ/Volume : 43
ಸಂಚಿಕೆ/Issue : 1
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | October 2020 | Monthly




A Journal of Karnataka State Secondary Teachers' Association

## ಸಂಪಾದಕೀಯ

ಅಕ್ಟೋಬರ್ ಮಾಸ ಬಂದಿತೆಂದರೆ ಸಾಕು, ನಮಗೆ ಇಬ್ಬರು ಭಾರತಮಾತೆಯ ಸುಪುತ್ರರ, ಮಹನೀಯರ ಜನ್ಮ ದಿನವನ್ನು ಆಚರಿಸುವ ಸಂಭ್ರಮ. ಒಬ್ಬರು ಮೋಹನದಾಸ ಕರಮಚಂದ ಗಾಂಧಿಯವರು, ಮತ್ತೊಬ್ಬರು ಲಾಲ್ ಬಹದ್ದೂರ್ ಶಾಸ್ತ್ರಿಯವರು. ಅವರು ತೀರಿಕೊಂಡು ಅನೇಕ ವರ್ಷಗಳಾದರೂ ಅವರ ಜನ್ಮದಿನವನ್ನು ಇಷ್ಟೊಂದು ಸಡಗರದಿಂದ ಆಚರಣೆ ಮಾಡುತ್ತೇವೆಂದರೆ ಅವರಿಬ್ಬರಲ್ಲಿ ಏನೋ ವಿಶೇಷವಿರಲೇಬೇಕು. ಇವರಿಬ್ಬರು ಸ್ವಾತಂತ್ರ್ಯ ಹೋರಾಟಗಾರರು, ಸರಳ ಜೀವನ ನಡೆಸಿದವರು, ಇಬ್ಬರು ಕಠೋರ ನಿರ್ಧಾರ ತೆಗೆದುಕೊಳ್ಳಬಲ್ಲ ಮೃದು ಮನಸ್ಸಿನವರು.

ಗಾಂಧೀಜಿಯವರ ನಿರ್ಧಾರಗಳು ಹಾಗೂ ಅವರ ಕಾರ್ಯಗಳು ಇಂದಿಗೂ ಅತ್ಯಂತ ಪ್ರಸ್ತುತವಾಗಿವೆ. ಗಾಂಧೀಜಿಯವರ "ಗ್ರಾಮೀಣ ರಾಷ್ಟ್ರೀಯ ಶಿಕ್ಷಣ"ವನ್ನೇ ತೆಗೆದುಕೊಂಡರೂ, ಅಂದು ಭಾರತದಲ್ಲಿನ ಬ್ರಿಟಿಷರ ಶಿಕ್ಷಣ ನೀತಿ ಕೇವಲ ಆಂಗ್ಲ ಭಾಷೆಯನ್ನು ಕಲಿತು ಗುಮಾಸ್ತರ ಕೆಲಸವನ್ನು ನಿರ್ವಹಿಸುವವರನ್ನು ತಯಾರು ಮಾಡುವುದಾಗಿತ್ತು. ಆದರೆ ಗಾಂಧೀಜಿಯವರು ಕೇವಲ ಬದಲಾವಣೆಯ ತೇಪೆ ಹಾಕಿ, ಶಿಕ್ಷಣ ಪದ್ಧತಿಯನ್ನು ನೇರಮಾಡುವುದು ಅಸಾಧ್ಯವೆಂದು ಭಾವಿಸಿ, ತಮ್ಮ ಕನಸಿನ ಸರ್ವೋದಯ ಸಮಾಜವನ್ನು ರಚಿಸಬಲ್ಲ, ಗ್ರಾಮೋದ್ಯೋಗಗಳಿಗೆ ಪ್ರಾಧಾನ್ಯ ನೀಡುವ ಗ್ರಾಮೀಣ ರಾಷ್ಟ್ರೀಯ ಶಿಕ್ಷಣದ ಮೂಲ ಪರಿಕಲ್ಪನೆಯನ್ನು ಜಾರಿಗೆ ತಂದಿದ್ದರು. ಸಮಕಾಲೀನ ಶಿಕ್ಷಣವೇತ್ತರು ರಾಷ್ಟ್ರೀಯ ಶಿಕ್ಷಣ ಎಂಬುದಕ್ಕೆ ಬೇರೆ ಬೇರೆ ಅರ್ಥ ಕಲ್ಪಿಸಿದ್ದರೂ, ಗಾಂಧೀಜಿಯವರ ಅರ್ಥಕಲ್ಪನೆ ಅದೆಲ್ಲಕ್ಕಿಂತ ಭಿನ್ನವಾಗಿತ್ತು. ಅವರ ಮಾತಿನಲ್ಲಿಯೇ ಹೇಳುವುದಾದರೆ "ಇದು ಗ್ರಾಮೀಣ, ಏಕೆಂದರೆ ಉನ್ನತ ಅಥವಾ ಇಂಗ್ಲೀಷ್ ಶಿಕ್ಷಣವನ್ನು ತ್ಯಜಿಸಿರುತ್ತದೆ; ರಾಷ್ಟ್ರೀಯ, ಏಕೆಂದರೆ ಸತ್ಯ, ಅಹಿಂಸೆ, ಗ್ರಾಮೋದ್ಯೋಗಗಳ ಮೂಲಕ ಯಾವ ನಿರ್ಬಂಧ ಹಸ್ತಕ್ಷೇಪಗಳೂ ಇಲ್ಲದೆ ಅವರ ಸರ್ವಸಾಮರ್ಥ್ಯಗಳು ವಿಕಸಿಸುವಂತೆ ಆಗುವುದು." ಈ ಎರಡು ವಿಷಯಗಳನ್ನು ಗಮನಿಸಿದರೆ ಸಾಕು, ಈ ಶಿಕ್ಷಣ ಪಾಶ್ಚಾತ್ಯರಿಂದ ಪ್ರಭಾವಿತವಾದುದಲ್ಲ ಎಂದು ಸ್ಪಷ್ಟವಾಗುತ್ತದೆ. ಮಾತೃಭಾಷೆಯಲ್ಲಿ ನೀಡುವ ಶಿಕ್ಷಣದ ಬಗ್ಗೆ ಗಾಂಧೀಜಿಯವರಿಗಿದ್ದ ವಿಚಾರವನ್ನು ಈ ಒಂದು ಹೇಳಿಕೆಯಲ್ಲಿ ನಾವು ಗಮನಿಸಬಹುದು– "ವಿದೇಶಿಯರ ಆಡಳಿತದಿಂದ ಬಂದೊದಗಿದ ಪೀಡನೆ ಎಂದರೆ ಈ ಆಂಗ್ಲ ಶಿಕ್ಷಣ ಮಾಧ್ಯಮ. ಇದು ರಾಷ್ಟ್ರದ ಶಕ್ತಿಯನ್ನು ಕುಂದಿಸಿ, ಮಕ್ಕಳ ಆಯುಷ್ಯವನ್ನು ಮೊಟಕುಗೊಳಿಸಿದೆ. ಮಕ್ಕಳನ್ನು ಸಾರ್ವಜನಿಕರೊಂದಿಗೆ ಬೇರ್ಪಡಿಸಿದೆಯಲ್ಲದೆ, ಶಿಕ್ಷಣ ವೆಚ್ಚವನ್ನು ಹೆಚ್ಚಿಸಿದೆ. ಇದು ಹೀಗೆಯೇ ಮುಂದುವರಿದರೆ ರಾಷ್ಟ್ರದ ಆತ್ಮವಿನಾಶಕ್ಕೆ ಕಾರಣವಾಗುತ್ತದೆ." ಗಾಂಧೀಜಿಯವರ ಈ ಎಲ್ಲಾ ಆಸೆಗಳನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಈಡೇರಿಸಲು ಸಹಕಾರಿಯಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮೂಲಶಿಕ್ಷಣದಲ್ಲಿ ಕಸುಬು ಕೇಂದ್ರಿತ ಶಿಕ್ಷಣಕ್ಕೆ ಗಾಂಧೀಜಿಯವರು ಹೆಚ್ಚು ಒತ್ತು ನೀಡಿದ್ದರು. ಅಂದೇ ಅವರು ಆತ್ಮನಿರ್ಭರ ಭಾರತದ ಕನಸನ್ನು ಈ ಮೂಲಕ ನೆರವೇರಬೇಕೆಂದು ಆಶಿಸಿದ್ದರು.ಗಾಂಧೀಜಿಯವರು ಸ್ವಚ್ಛ ಮತ್ತು ಆರೋಗ್ಯಕರ ಭಾರತದ ಕನಸನ್ನು ಕಂಡ ಮಹಾನ್ ಪುರುಷ. ಇಂದು ಅವರ ಕನಸು ಸ್ವಚ್ಛ ಭಾರತ ಅಭಿಯಾನದ ಮೂಲಕ ನೆರವೇರುತ್ತಿದೆ. ಗಾಂಧೀಜಿಯವರ ಸ್ವದೇಶಿ ಚಳುವಳಿಯ ಭಾಗವೇ ಇಂದಿನ ವೋಕಲ್ ಫಾರ್ ಲೋಕಲ್.

ಇನ್ನು ಲಾಲ್ ಬಹದ್ದೂರ್ ಶಾಸ್ತ್ರೀಯವರು ಭಾರತ ಕಂಡ ಅತ್ಯಂತ ಸರಳ, ಪ್ರಾಮಾಣಿಕ, ಸ್ವಾಭಿಮಾನಿ ದಕ್ಷ ಪ್ರಧಾನಿ. ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದಿಂದ ಅತ್ಯಂತ ಪ್ರಭಾವಿತರಾಗಿ ತಮ್ಮ ಹದಿನಾರನೇ ವರುಷದ ವಯಸ್ಸಿನಲ್ಲಿಯೇ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಲು ನಿರ್ಧರಿಸಿದ ದೇಶಪ್ರೇಮಿ. ಅವರು ತೆಗೆದುಕೊಳ್ಳುತ್ತಿದ್ದ ದಿಟ್ಟ ನಿರ್ಧಾರಗಳು ಇಂದಿಗೂ ನಮ್ಮ ನಾಯಕರಿಗೆ ಆದರ್ಶಪ್ರಾಯವಾಗಬೇಕು. ಕುರ್ಚಿಗಾಗಿ ಏನನ್ನು ಬೇಕಾದರೂ ಮಾಡುತ್ತೇವೆನ್ನುವ ನಾಯಕರು, ಅಂದು ಲಾಲ್ ಬಹದ್ದೂರ್ ಶಾಸ್ತ್ರಿಯವರು ರೈಲ್ವೆ ಸಚಿವರಾಗಿದ್ದಾಗ ಹಲವಾರು ಜನರನ್ನು ಬಲಿ ತೆಗೆದುಕೊಂಡ ಅರಿಯಲೂರು ಬಳಿ ಆದ ರೈಲ್ವೆ ಅಪಘಾತವೊಂದಕ್ಕೆ ತಾನು ಜವಾಬ್ದಾರಿಯೆಂದು ಅನಿಸಿದ್ದರಿಂದ ತಮ್ಮ ರೈಲ್ವೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಲಾಲ್ ಬಹುದ್ದೂರ್ ಶಾಸ್ತ್ರಿಯವರನ್ನು ಆದರ್ಶವಾಗಿ ತೆಗೆದುಕೊಳ್ಳಬೇಕು. ಲಾಲ್ ಬಹದ್ದೂರ್ ಶಾಸ್ತ್ರಿಯವರ ವಿನಮ್ರತೆ, ಸಹಿಷ್ಣುತೆ, ಮಹಾನ್ ಆಂತರಿಕ ಶಕ್ತಿಯುಳ್ಳ ಮತ್ತು ದೃಢನಿಶ್ಚಯವುಳ್ಳ, ಜನರ ಭಾಷೆಯನ್ನು ಅರ್ಥೈಸಿಕೊಂಡ ಜನನಾಯಕನ ಗುಣ ಇಂದಿಗೂ ಅತಿ ಹೆಚ್ಚು ಪ್ರಸ್ತುತ.

ಇವರಿಬ್ಬರನ್ನೇ ನಮ್ಮ ಜೀವನದಲ್ಲಿ ಆದರ್ಶಪ್ರಾಯವಾಗಿ ತೆಗೆದುಕೊಂಡರೆ ನಮ್ಮ ಜೀವನ ಸಾರ್ಥಕ.

**ಸಹೃದಯ ಓದುಗರೆಲ್ಲರಿಗೂ ಶರನ್ನವರಾತ್ರಿಯ ಹಾರ್ದಿಕ ಶುಭಾಶಯಗಳು. ದೇವಿ ಚಾಮುಂಡೇಶ್ವರಿಯು ನಿಮ್ಮ ಜೀವನದಲ್ಲಿನ ಕಷ್ಟವನ್ನು ಹೋಗಲಾಡಿಸಿ ಆರೋಗ್ಯ ಭಾಗ್ಯವನ್ನು ಕೊಟ್ಟು ರಕ್ಷಿಸಲೆಂದು ಕ.ರಾ.ಮಾ.ಶಿ.ಸಂಘವು ಆಶಿಸುತ್ತದೆ. ಆದಷ್ಟು ಬೇಗ ಕೊರೋನಾ ಎಂಬ ವೈರಸ್‌ನನ್ನು ಸಂಹರಿಸಿ, ಆರೋಗ್ಯವನ್ನು ನೀಡಲಿ.**

ಸಂಪಾದಕ

## ಸೂಕ್ತಿ



"ಯಾರೂ ಮತ್ತೊಬ್ಬರಿಗೆ ಕಲಿಸಲಾರರು. ಗುರು ತಾನು ಕಲಿಸುತ್ತಿರುವೆ ಎಂದು ಭಾವಿಸುವುದರಿಂದ ಎಲ್ಲವನ್ನೂ ಹಾಳು ಮಾಡುವನು. ಪ್ರತಿಯೊಬ್ಬನಲ್ಲಿಯೂ, ಒಂದು ಮಗುವಿನಲ್ಲೂ ಕೂಡ ಆಗಲೆ ಜ್ಞಾನವಿದೆ ಎನ್ನುವುದು ವೇದಾಂತ. ಅದು ಕೇವಲ ಜಾಗೃತವಾಗಬೇಕಾಗಿದೆ ಅಷ್ಟೆ. ಇಷ್ಟು ಮಾತ್ರ ಗುರುವಿನ ಕೆಲಸ. ಮಕ್ಕಳೇ ತಮ್ಮ ಬುದ್ಧಿಯನ್ನು ಉಪಯೋಗಿಸಿ ಅದನ್ನು ಕಾರ್ಯಗತ ಮಾಡುವುದನ್ನು ಕಲಿಯಲಿ".

- ಸ್ವಾಮಿ ವಿವೇಕಾನಂದ

## ಪರಿವಿಡಿ


- ಗಾಂಧೀಜಿ ಚಿಂತನೆಯ ಪ್ರಸ್ತುತತೆ 3
- ಗಾಂಧೀಜಿ ದೇಶಿ ಶಿಕ್ಷಣ ನೀತಿ 4
- ನಾವೂ ಹೀಗಾಗಬಹುದೇ? 5
- ವಿದ್ಯಾರ್ಥಿಗಳಿಗೆ ಗಾಂಧೀಜಿಯ ಸಂದೇಶ 6
- ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಶ್ರೀ ಜೆ. ಪಿ. ಸಿಂಘಾಲರವರ ದೃಷ್ಟಿಕೋನ 7
- ರಾಷ್ಟ್ರೀಯ ಶಿಕ್ಷಣ ನೀತಿ 2020 ವಿಚಾರ ಗೋಷ್ಠಿ – ಬೆಂಗಳೂರು, ಬಾಗಲಕೋಟೆ 9
- 'ಸ್ವಾತಂತ್ರ ಹೋರಾಟ–ಹಿನ್ನೋಟ ಮುನ್ನೋಟ' ಪುಸ್ತಕ ಲೋಕಾರ್ಪಣೆ 11


# ಗಾಂಧೀಜಿ ಚಿಂತನೆಯ ಪ್ರಸ್ತುತತೆ




**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**


ಇದೇ ಅಕ್ಟೋಬರ್ ಎರಡರಂದು ಮಹಾತ್ಮ ಗಾಂಧಿಯವರ 151ನೇ ಜನ್ಮ ಜಯಂತಿಯನ್ನು ಇಡೀ ದೇಶದಲ್ಲಿ ಆಚರಿಸಲಾಯ್ತು. ಓರ್ವ ವ್ಯಕ್ತಿಯನ್ನು ಕೋಟ್ಯಾಂತರ ಜನ ಆತನ ದೇಹವಳಿದ ನಂತರವೂ ನೆನಪಿಡುವುದೆಂದರೆ ಆತನ ವ್ಯಕ್ತಿತ್ವದಲ್ಲಿ ಏನೋ ವಿಶೇಷವಿರಬೇಕು. ದೇಶ ಆತನನ್ನು ಮಹಾತ್ಮ ಎಂದು ಕರೆದಿದ್ದೂ ಇದೇ ಕಾರಣಕ್ಕಿರಬೇಕು. ಹಾಗಾದರೆ ಜೀವನದ ವಿವಿಧ ಮುಖಗಳ ಬಗ್ಗೆ ಆತನ ಚಿಂತನೆ ಹೇಗಿತ್ತು? ನಾಡಿನ ಜನಮಾನಸದ ಮೇಲೆ ಅದರ ಪರಿಣಾಮವೇನು? ಅವರ ವಿಚಾರಗಳಿಗೆ ಕಾಲಮಿತಿ ಇದೇಯೇ? ಅಥವಾ ಕಾಲಾತೀತವೇ? ಈ ಕಾಲಕ್ಕೆ ಅದರ ಪ್ರಸ್ತುತತೆ ಏನು? ಇದರ ವಿಮರ್ಶೆ ಮಾಡುವುದು ಈ ಲೇಖನದ ಉದ್ದೇಶ.

ಮೋಹನದಾಸ್ ಗಾಂಧಿ ಹುಟ್ಟಿದ್ದು 1869ರ ಅಕ್ಟೋಬರ್ 2 ರಂದು, ಗುಜರಾತಿನ ಕಾಥೇವಾಡದ ಪೋರ್‌ಬಂದರ್ ಎಂಬಲ್ಲಿ. ತಂದೆ ಕರಮಚಂದಗಾಂಧಿ, ತಾಯಿ ಪುತಲೀಬಾಯಿ. ಮೋಹನನ ವ್ಯಕ್ತಿತ್ವವನ್ನು ರೂಪಿಸಿದ್ದು ಆತನ ತಾಯಿ. ಜೀವನಪೂರ್ತಿ ಆತ ಆಚರಿಸಿಕೊಂಡು ಬಂದ "ಸತ್ಯಂವದ-ಧರ್ಮಂಚರ", ಸತ್ಯವನ್ನು ನುಡಿ, ಧರ್ಮಮಾರ್ಗದಲ್ಲಿ ನಡಿ ಎಂಬುದನ್ನು ಆತ ಕಲಿತಿದ್ದು ತನ್ನ ತಾಯಿಯಿಂದ. ಆಕೆ ಧರ್ಮಭೀರು. ಭಗವದ್ಗೀತೆ, ರಾಮಾಯಣ, ಮಹಾಭಾರತಗಳನ್ನು ಮನನಮಾಡಿದ್ದು ಅದನ್ನು ಮಗನಿಗೂ ಧಾರೆ ಎರೆದಿದ್ದಳು. ಸತ್ಯಹರಿಶ್ಚಂದ್ರನ ನಾಟಕ ತೋರಿಸಿ 'ಸತ್ಯ'ದ ಮಹತ್ವ ತಿಳಿಸಿದ್ದಳು. ಮನೆಯೆ ಮೊದಲ ಪಾಠಶಾಲೆ, ಜನನಿ ತಾನೇ ಮೊದಲ ಗುರುವು ಎಂಬ ಮಾತನ್ನು ಅನ್ವರ್ಥಮಾಡಿದ ತಾಯಿ ಪುತಲೀಬಾಯಿ. ಗಾಂಧಿ ಬ್ಯಾರಿಸ್ಟರ್ ಪದವಿ ಪಡೆಯಲು ಇಂಗ್ಲೆಂಡಿಗೆ ಹೊರಟು ನಿಂತಾಗ ಮಗನಿಂದ ಮ್ಲೇಚ್ಛ ದೇಶದಲ್ಲಿ ಮದ್ಯ, ಮಾಂಸ ಮುಟ್ಟುವುದಿಲ್ಲವೆಂಬ ಪ್ರತಿಜ್ಞೆ ಮಾಡಿಸಿಕೊಂಡಿದ್ದಳು. ಲಂಡನ್‌ನ ಚಳಿಯ ವಾತಾವರಣದಲ್ಲೂ ಗಾಂಧಿ ತಾಯಿಗೆ ಕೊಟ್ಟ ಮಾತನ್ನು ಉಳಿಸಿಕೊಂಡು ಶುದ್ಧ ಶಾಖಾಹಾರಿಯಾಗಿದ್ದರು. ಹೀಗೆ ಅವರ ಮೇಲೆ ತಾಯಿಯ ಪ್ರಭಾವ ಅಪಾರ.



### ಸತ್ಯಾಗ್ರಹಿಯಾಗಿ ಪರಿವರ್ತನೆ

ಬ್ಯಾರಿಸ್ಟರ್ ಆಗಿ ಗಾಂಧಿ ಭಾರತಕ್ಕೆ ಹಿಂದಿರುಗಿದ್ದು 1891ರ ಜುಲೈ 9 ರಂದು. ಮುಂಬಯಿ ಕೋರ್ಟ್‌ನಲ್ಲಿ ಅವರು ವಾದಮಾಡಿದ ಕೇಸ್ ವಿಫಲಗೊಂಡು ಅವರನ್ನು ಮುಂಬೈನ ಶಾಲೆಯೊಂದರಲ್ಲಿ ಅರೆಕಾಲಿಕ ಶಿಕ್ಷಕನನ್ನಾಗಿ ಸೇರಿಸಿಕೊಳ್ಳಲೂ ನಿರಾಕರಿಸಲಾಯ್ತು. ನಿರಾಶೆಗೊಂಡ ಅವರು ರಾಜಕೋಟ್‌ಗೆ ತೆರಳಿದರು. ಅಲ್ಲಿಯೂ ಅವರ ವಕೀಲಿ ಓದು ಕೈಹಿಡಿಯಲಿಲ್ಲ. ಬ್ರಿಟಿಷ್ ಅಧಿಕಾರಿಯಿಂದ ಛೀಮಾರಿ ಹಾಕಿಸಿಕೊಳ್ಳಬೇಕಾಯಿತು. ಇದೇ ಸಮಯಕ್ಕೆ ಅವರು ನಂಬಿದ್ದ ದೇವರು ಕೈಹಿಡಿದ. 1893 ರಲ್ಲಿ ದಕ್ಷಿಣ ಆಫ್ರಿಕದ ನಟಾಲ್‌ನ ಭಾರತೀಯ ಸಂಸ್ಥೆಯೊಂದು ಅವರನ್ನು 1 ವರ್ಷದ ಗುತ್ತಿಗೆ ಆಧಾರದಲ್ಲಿ ದಕ್ಷಿಣ ಆಫ್ರಿಕಾಗೆ ಕರೆಸಿಕೊಂಡಿತು. ಅಲ್ಲವರು 20 ವರ್ಷ ವಾಸವಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರದ್ದೇ ಆಡಳಿತ. ಡರ್ಬಾನ್‌ನ ಕೋರ್ಟ್‌ನಲ್ಲಿ ರುಮಾಲು ತೆಗೆಯಲು ಹೇಳಿದಾಗ ಕೋರ್ಟ್‌ನಿಂದಲೇ ಹೊರ ನಡೆದರು. 'ಪ್ರಿಟೋರಿಯಾ'ಗೆ ರೈಲಿನಲ್ಲಿ ತೆರಳುವಾಗ ಪ್ರಥಮ ದರ್ಜೆ ಬೋಗಿಯಿಂದ ಅವರನ್ನು ಹೊರತಳ್ಳಿದರು. 'ಪೈಟರ್‌ಮಾರಿಟ್ಸ್ ಬರ್ಗ' ಎಂಬ ನಿಲ್ದಾಣದಲ್ಲಿ ನಡುಗುತ್ತಾ ರಾತ್ರಿ ಕಳೆಯಬೇಕಾಯ್ತು. ಕುದುರೆಗಾಡಿಯಲ್ಲಿ ಬಿಳಿಚಾಲಕನಿಂದ ಹೊಡೆತ ತಿನ್ನಬೇಕಾಯಿತು. ನಟಾಲ್‌ನಲ್ಲಿ ಭಾರತೀಯರಿಗೆ ಈ ಬಗೆಯ ಅವಮಾನಗಳು ಸಾಮಾನ್ಯವಾಗಿತ್ತು. ಈ ಎಲ್ಲ ಘಟನೆಗಳು ಅವರ ಸ್ವಾಭಿಮಾನವನ್ನು ಕೆಣಕಿತು. ಇನ್ನು ಈ ರೀತಿಯ ಅವಮಾನವನ್ನು ಸಹಿಸೆನೆಂಬ ನಿಶ್ಚಯ ಮಾಡಿದರು. ಇಲ್ಲಿಂದ ಪ್ರಾರಂಭವಾಯಿತು ಅವರ ಶಾಂತಿಯುತ ಸತ್ಯಾಗ್ರಹದ ಹೋರಾಟ.

ತನ್ನ 18ನೇ ವಯಸ್ಸಿನವರೆಗೆ ಎಂದೂ ದಿನಪತ್ರಿಕೆಯನ್ನೂ ಓದದ, ಒಂದು ಭಾಷಣವನ್ನು ಓದಲು ನಿಂತಾಗಲಾಗಲೀ ಅಥವಾ ನ್ಯಾಯಾಲಯದಲ್ಲಿ ವಾದಮಾಡುವಾಗಲಾಗಲೀ ಸಭಾಕಂಪನದಿಂದ ನಡುಗುತ್ತಿದ್ದ ಗಾಂಧಿ ಜುಲೈ 1894ರಲ್ಲಿ ತಮ್ಮ 25ನೇ ವಯಸ್ಸಿನಲ್ಲಿ ಪ್ರಬಲ ರಾಜಕೀಯ ನಾಯಕನಾಗಿ, ಉತ್ತಮ ಭಾಷಣಕಾರನಾಗಿ ಬದಲಾದರು. ದಕ್ಷಿಣ ಆಫ್ರಿಕಾದಲ್ಲಿ ಅನ್ಯಾಯದ ವಿರುದ್ಧ ಸಿಡಿದೆದ್ದು ಭಾರತೀಯರಿಗೆ ನ್ಯಾಯ ದೊರಕಿಸಿಕೊಟ್ಟರು. ಹರಿದು ಹಂಚಿದ್ದ ಭಾರತೀಯರನ್ನು ಒಗ್ಗೂಡಿಸಿ ಹೋರಾಟದಲ್ಲಿ ಭಾಗವಹಿಸುವಂತೆ ಮಾಡಿದರು. ಅವರ ಲೇಖನಗಳು ಇಂಗ್ಲೆಂಡಿನ ಹಾಗೂ ಭಾರತದ ಪತ್ರಿಕೆಗಳಲ್ಲೂ ಪ್ರಕಟವಾಗಿ ಬ್ರಿಟಿಷ್ ಆಡಳಿತದ ಕಣ್ತೆರೆಸಿತು. ಅದರ ಪರಿಣಾಮವಾಗಿ ಭಾರತೀಯರ ಮೇಲಿನ ಬಿಳಿಯರ ದಬ್ಬಾಳಿಕೆ ಎಷ್ಟೋ ಕಡಿಮೆಯಾಯಿತು. 1915ರ ಜನವರಿಯಲ್ಲಿ ಓರ್ವ ಯಶಸ್ವೀ ಹೋರಾಟಗಾರನಾಗಿ ಅವರು ಭಾರತಕ್ಕೆ ಹಿಂತಿರುಗಿದರು.

### ಭಾರತ ಸಂಚಾರ

ಭಾರತದಲ್ಲೂ ಬ್ರಿಟಿಷರ ವಿರುದ್ಧದ ಹೋರಾಟಕ್ಕಾಗಿ ಅವರ ಮನಸ್ಸು ತುಡಿಯುತ್ತಿತ್ತು. ಮುಂಬಯಿಗೆ ಬಂದ ಕೂಡಲೇ ತಮ್ಮ ರಾಜಕೀಯ ಗುರುಗಳಾದ, ಕಾಂಗ್ರೆಸ್‌ನ ಮಂದಗಾಮಿ ಗುಂಪಿನ ಪ್ರಮುಖರಾದ ಗೋಪಾಲಕೃಷ್ಣ ಗೋಖಲೆಯವರನ್ನು ಭೇಟಿ ಮಾಡಿದರು. ಗೋಖಲೆಯವರು, ಭಾರತವನ್ನು ಅರಿಯಲು ಭಾರತಭ್ರಮಣ ಮಾಡು ಎಂದು ಉಪದೇಶಿಸಿದರು. ಅವರ ಮಾತಿನಂತೆ ಗಾಂಧೀಜಿ ಭಾರತದ

**ಪುಟ 10 ಕ್ಕೆ ➢**

# ಗಾಂಧೀಜಿ ದೇಶಿ ಶಿಕ್ಷಣ ನೀತಿ


**ಡಾ|| ಟಿ. ಎನ್. ಲೋಕೇಶ್**
**ಪ್ರಾಧ್ಯಾಪಕರು & ಚಿಂತಕರು**
**ಎಸ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜು**
**ಜಯನಗರ, ಬೆಂಗಳೂರು**




ಗಾಂಧೀಜಿ ಜಗತ್ತು ಕಂಡ ಶ್ರೇಷ್ಠ ಶಿಕ್ಷಣತಜ್ಞ, ತಮ್ಮ ಜೀವನವನ್ನೇ ಪ್ರಯೋಗಕ್ಕೆ ಒಳಪಡಿಸಿ ಸತ್ಯದ ಅನ್ವೇಷಣೆ ಮಾಡಿದ ಯುಗ ಪುರುಷ. 'ನನ್ನ ಜೀವನವೇ ಸಂದೇಶ' ಎಂದು ಸಾರಿದ ಮಹಾನ್ ಮಾನವತಾವಾದಿ. ಭಾರತೀಯ ಸಮಾಜಕ್ಕೆ ಅಗತ್ಯವಿದ್ದ ದೇಶಿ ಶಿಕ್ಷಣ ನೀತಿ ನೀಡಿದ ದಾರ್ಶನಿಕ ಮತ್ತು ಶೈಕ್ಷಣಿಕ ಪ್ರಾಯೋಗಿಕವಾದಿ.

ಜೀವನ ತತ್ವಶಾಸ್ತ್ರ ಮತ್ತು ಶೈಕ್ಷಣಿಕ ತತ್ವಶಾಸ್ತ್ರಗಳು ಒಂದೇ ಎಂಬ ಮೌಲಿಕ ವಿಚಾರಧಾರೆ ನೀಡಿದ ಮಹಾತ್ಮ. ಗಾಂಧೀಜಿಯವರ ಶೈಕ್ಷಣಿಕ ವಿಚಾರಧಾರೆಗಳು ಇಂದಿಗೂ ಹೆಚ್ಚು ಪ್ರಸ್ತುತವೆನಿಸುತ್ತವೆ. ಈ ಕಾರಣದಿಂದ ಗಾಂಧೀಜಿಯ ಶೈಕ್ಷಣಿಕ ವಿಚಾರಧಾರೆಗೆ ಶತಮಾನಗಳು ಕಳೆದರೂ ಅವುಗಳ ಮೌಲ್ಯ ಕಾಲಾತೀತ ಮತ್ತು ದೇಶಾತೀತ ಎಂಬುದು ನಿರ್ವಿವಾದ.

ಪ್ರಸಕ್ತ ಭಾರತೀಯ ಶೈಕ್ಷಣಿಕ ಇತಿಹಾಸದಲ್ಲಿ ಕ್ರಾಂತಿಯನ್ನೇ ಸೃಷ್ಟಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ–2020ರಲ್ಲೂ ಸಹ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಗಾಂಧೀಜಿಯ ಶೈಕ್ಷಣಿಕ ವಿಚಾರಧಾರೆ ಪ್ರತಿಫಲನಗೊಂಡಿವೆ. ಜಾಗತಿಕ ಮಟ್ಟದಲ್ಲಿ ಇಂದಿಗೂ ಗಾಂಧೀಜೀಯ ಶೈಕ್ಷಣಿಕ ವಿಚಾರಧಾರೆ ಸರ್ವಕಾಲಿಕ ಮಾನ್ಯವೆನಿಸಿದೆ. ಗಾಂಧೀಜಿಯವರ ಪ್ರಕಾರ ಶಿಕ್ಷಣವೆಂದರೆ "ಮೌಢ್ಯತೆ ಸರಿಸಿ, ಕತ್ತಲೆಯನ್ನು ಹೊಡೆದೋಡಿಸುವ ಪ್ರಬಲ ಅಸ್ತ್ರ." ಗಾಂಧೀಜಿ ತಾವು ಬದುಕಿದ್ದ ಕಾಲಘಟ್ಟದಲ್ಲಿ ರಾಷ್ಟ್ರದ ದಿನಮಾನಗಳ ಪರಿಸ್ಥಿತಿಗೆ ಸರಿಹೊಂದಬಹುದಾದ ದೇಶಿ ಶಿಕ್ಷಣ ನೀತಿ– ಮೂಲಶಿಕ್ಷಣ ಕ್ರಮದ ಪರಿಕಲ್ಪನೆ ನೀಡಿ ಆ ಮೂಲಕ ಭಾರತವನ್ನು ಸ್ವತಂತ್ರ, ಸ್ವಾವಲಂಬಿ, ಆತ್ಮನಿರ್ಭರ, ಸದೃಢ ರಾಷ್ಟ್ರವನ್ನಾಗಿಸುವ ಕನಸನ್ನು ಕಂಡವರು.

ಗಾಂಧೀಜಿಯವರ ಪ್ರಕಾರ ಶಿಕ್ಷಣವೆಂದರೆ ಮಗು ಮತ್ತು ಮಾನವನಲ್ಲಿನ ಶಾರೀರಿಕ, ಬೌದ್ಧಿಕ ಮತ್ತು ಆತ್ಮದಲ್ಲಿನ ಅತ್ಯುತ್ತಮವಾದುದನ್ನು ಸರ್ವತೋಮುಖವಾಗಿ ಹೊರಗೆಳೆಯುವುದೇ ಆಗಿದೆ. ಇಂದಿನ ಶಿಕ್ಷಣ ವ್ಯವಸ್ಥೆಯು ಕೇವಲ ಮಗುವಿನ ಬೌದ್ಧಿಕ ಪ್ರಗತಿಯನ್ನು ಅಂಕಗಳ ಆಧಾರದ ಮೇಲೆ ಅಳೆಯಲು ಶಕ್ತವಾಗಿದೆಯೇ ಹೊರತು, ಮಗುವಿನ ಸಮಗ್ರ ವ್ಯಕ್ತಿತ್ವ ಮಾಪನ ಮಾಡುವುದರಲ್ಲಿ ವಿಫಲವಾಗಿರುವುದು ಅತ್ಯಂತ ದುರಾದೃಷ್ಟಕರವೇ ಆಗಿದೆ.

ಶಿಕ್ಷಣಕ್ಕೆ ಸ್ವಾವಲಂಬನೆ, ಸಾಂಸ್ಕೃತಿಕ, ಚಾರಿತ್ರ್ಯ, ನೈತಿಕ, ಆಧ್ಯಾತ್ಮಕ ಮತ್ತು ಸರ್ವೋತೋಮುಖ ಗುರಿಗಳಿರಬೇಕು ಎಂಬುದು ಗಾಂಧೀಜಿಯವರ ಸ್ಪಷ್ಟ ನಿಲುವಾಗಿತ್ತು. 'ಮಾಡುತ್ತ ಕಲಿ', 'ಗಳಿಸುತ್ತಾ ಕಲಿ' ಎಂಬುದು ಶಿಕ್ಷಣದ ಮಂತ್ರವಾಗಬೇಕು. ಆ ಮೂಲಕ ವೃತ್ತಿಪರ ಕೌಶಲ್ಯಯುಕ್ತ ಶಿಕ್ಷಣ ನೀಡಿ 'ಆತ್ಮನಿರ್ಭರ ಭಾರತ ನಿರ್ಮಾಣದ ಕನಸು ಕಂಡಿದ್ದರು. ಈ ಅಂಶ ಪ್ರಸ್ತುತ ರಾಷ್ಟ್ರೀಯ ಶಿಕ್ಷಣ ನೀತಿ– 2020ರಲ್ಲಿ ಪ್ರತಿಫಲಗೊಂಡಿರುವುದು ನಿಜಕ್ಕೂ ಅಭಿನಂದನಾರ್ಹ.

ಮಾತೃಭಾಷೆ ಬೋಧನೆಯ ಮಾಧ್ಯಮವಾಗಬೇಕು ಎಂಬುದು ಗಾಂಧೀಜಿಯವರ ತೀಕ್ಷ್ಣ ನಿಲುವಾಗಿತ್ತು. ಆಂಗ್ಲ ಮಾಧ್ಯಮದ ಬೋಧನೆ ಭಾರತೀಯರನ್ನು ಕೇವಲ ಅನುಕರಣೆ ಮತ್ತು ಕಂಠಪಾಠಕ್ಕೆ ಮಾತ್ರ ಪ್ರೋತ್ಸಾಹಿಸುತ್ತಿದೆ. ತತ್ಪರಿಣಾಮ ಸ್ವದೇಶಿ ನೆಲದಲ್ಲಿ ನಮ್ಮವರೇ ವಿದೇಶಿಯರಾಗುವ ದುರ್ದೈವ ಬಂದಿದೆ ಎಂಬ ಆತಂಕ ವ್ಯಕ್ತಪಡಿಸಿದ್ದರು. ಮಾತೃಭಾಷೆ ಕಡ್ಡಾಯ ಮಾಧ್ಯಮವಾಗಬೇಕು ಹಾಗೂ ಇಂಗ್ಲೀಷನ್ನು ಕೇವಲ ಭಾಷೆಯನ್ನಾಗಿ ಕಲಿಯಬೇಕೇ ಹೊರತು ಮಾಧ್ಯಮವಾಗಿಯಲ್ಲ ಎಂಬುದು ಗಾಂಧೀಜಿಯವರ ಸ್ಪಷ್ಟ ವಿಚಾರವಾಗಿತ್ತು. ಪಠ್ಯಕ್ರಮ ಕರಕುಶಲ ಉತ್ಪಾದಕತೆಯ ಆಧಾರಿತವಾಗಿರಬೇಕು. ಜೀವಿಸುತ್ತ ಕಲಿ, ಸೇವೆ, ಭಾಗವಹಿಸುವಿಕೆ, ಸ್ವಯಂ ಅಭಿವ್ಯಕ್ತಿಕರಣ, ಸಹಸಂಬಂಧತೆ, ಚರ್ಚಾಪದ್ಧತಿ, ಪ್ರಶ್ನಿಸುವಿಕೆ ಇವು ಬೋಧನಾ ಪದ್ಧತಿಗಳಾಗಬೇಕು ಎನ್ನುವುದರ ಮೂಲಕ ಕಂಠಪಾಠದ ಶಿಕ್ಷಣವನ್ನು ವಿರೋಧಿಸಿದ್ದರು.



ರಾಷ್ಟ್ರೀಯ ಸಂತ ಸ್ವಾಮಿ ವಿವೇಕಾನಂದರ ವಿಚಾರಧಾರೆಯಿಂದ ಪ್ರಭಾವಿತರಾಗಿದ್ದ ಗಾಂಧೀಜಿ ರಾಷ್ಟ್ರೀಯತೆಯ ಸ್ವದೇಶಿ ಶಿಕ್ಷಣ ಸರ್ವರಿಗೂ ಸಿಗಬೇಕು ಎಂದು ಬಯಸಿದ್ದರು. ಮಗುವಿನ ಶಿಕ್ಷಣದಲ್ಲಿ ಮೌಲ್ಯಧಾರಿತ ಧಾರ್ಮಿಕ ಶಿಕ್ಷಣಕ್ಕೆ ಒತ್ತು ಕೊಟ್ಟು ಆ ಮೂಲಕ ವ್ಯಕ್ತಿತ್ವ ನಿರ್ಮಾಣ ಮತ್ತು ಶೀಲ ಸಂವರ್ಧನೆಯಾಗುವಂತೆ ಮಾಡಿ ಶಾಲೆಯನ್ನು ಭವಿಷ್ಯದ ನಾಗರೀಕತ್ವದ ತೊಟ್ಟಿಲನ್ನಾಗಿ ಪರಿವರ್ತಿಸಬೇಕು ಎಂದು ಅಭಿಪ್ರಾಯಪಟ್ಟಿದ್ದರು. ಗಾಂಧೀಜಿಯವರ ಬದುಕು ಹಾಗೂ ವಿಚಾರಧಾರೆ ಜಗತ್ತಿನ ಮಹಾನ್ ಚೇತನಗಳಾದ ದಲೈಲಾಮ, ಮಾರ್ಟಿನ್ ಲೂಥರ್‌ಕಿಂಗ್, ನೆಲ್ಸನ್ ಮಂಡೇಲಾ, ಆಂಗ್‌ಸಾನ್ ಸೂಕಿಯಂತವರ ಬದುಕಿಗೆ ಪ್ರೇರಣೆ ನೀಡಿದೆ.

ಗಾಂಧೀಜಿ ಭಾರತದ ಸಮಾಜಕ್ಕೆ ಅಗತ್ಯವಿರುವ ದೇಶಿ ಶಿಕ್ಷಣ ನೀತಿಯನ್ನು ನೀಡಿ ಭಾರತವನ್ನು ಸ್ವಚ್ಛ, ಸದೃಢ, ಸ್ವಾವಲಂಬಿ, ಸ್ವದೇಶಿ ಮತ್ತು ಸ್ವತಂತ್ರ ರಾಷ್ಟ್ರವನ್ನಾಗಿ ಪರಿವರ್ತಿಸಬೇಕು ಎಂಬ ಅಚಲ ನಿರ್ಧಾರ ಹೊಂದಿದ್ದರು. ಪ್ರಸ್ತುತ ರಾಷ್ಟ್ರೀಯ ಶಿಕ್ಷಣ ನೀತಿ –2020 ಗಾಂಧೀಜಿಯವರ ವಿಚಾರಧಾರೆಗಳ ಸಂಗಮ, ಅಂತಹ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳುವುದೇ, ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವವೆಂದರೆ ಅದು ಅತಿಶಯೋಕ್ತಿಯಲ್ಲ.

●

## ಶಿಕ್ಷಕ ಸ್ತಂಭ

# ನಾವೂ ಹೀಗಾಗಬಹುದೇ?

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು




**ಗುರುವೋ ಬಹವಸ್ಸಂತಿ ಶಿಷ್ಯ ವಿತ್ತಾಪಹಾರಕಾಃ।**
**ದುರ್ಲಭಃ ನ ಸ ಗುರುರ್ಲೋಕೇ ಶಿಷ್ಯ ಚಿತ್ತಾಪಹಾರಕಾಃ॥**

ಗುರುಗಳಲ್ಲಿ ಮೂರು ಬಗೆ–ಶಿಷ್ಯರ ವಿತ್ತವನ್ನು(ಹಣ) ಅಪಹರಿಸುವವರು, ಶಿಷ್ಯರ ಚಿತ್ತವನ್ನು ಅಪಹಾರ ಮಾಡುವವರು (ಮನಸೆಳೆಯುವುದು) ಮತ್ತು ಶಿಷ್ಯರ ಚಿತ್ತ ತಾಪವನ್ನು ಹರಿಸುವವರು.

ಜಿ.ಪಿ ರಾಜರತ್ನಂ ವಿವರಿಸುತ್ತಾರೆ–

ಮೊದಲೇ ಗೊಂದಲದಲ್ಲಿರುವ ಶಿಷ್ಯರನ್ನು ಇನ್ನಷ್ಟು ಗಲಿಬಿಲಿಗೊಳಿಸಿ ಅವರ ಹತ್ತಿರ ಇರುವ ಹಣವನ್ನು ಲಪಟಾಯಿಸುವ ಗುರುಗಳು ಶಿಷ್ಯಾವಿತ್ತಾಪಹಾರಕರು. ಹೀಗೆ ಮಾಡದೆ ತಮ್ಮ ವಿದ್ವತ್ತಿನಿಂದ, ಪಾಂಡಿತ್ಯದಿಂದ ಶಿಷ್ಯರ ಚಿತ್ತವನ್ನು ಅಪಹರಿಸಿ, ಅವರನ್ನು ತಾತ್ಕಾಲಿಕವಾಗಿ ಮೂಕರನ್ನಾಗಿ ಅಂದರೆ ತಮ್ಮ ಪ್ರತಿಭೆಗೆ ಮಾರುಹೋಗುವಂತೆ, ಬೆರಗಾಗುವಂತೆ ಮಾಡುವವರು ಚಿತ್ತಾಪಹಾರಕರು. ಮೊದಲಿನ ಗುಂಪಿಗೆ ಸೇರುವವರು ಬಹಳ ಮಂದಿ. ಎರಡನೆಯ ಗುಂಪಿನವರು ಸಿಗುವುದು ಸುಲಭವಲ್ಲ. ನಿಜವಾದ ಗುರು ಎಂದರೆ 'ಶಿಷ್ಯ ಚಿತ್ತಾಪಹಾರಕರು'. ಇವರು ಶಿಷ್ಯರ ಚಿತ್ತದ ತಾಪವನ್ನು ತಿಳಿಯಬಲ್ಲವರು. ಏಕೆಂದರೆ ಇವರು ಮೊದಲೇ ತಮ್ಮ ಚಿತ್ತದ ತಾಪವನ್ನು ಹೋಗಲಾಡಿಸಿಕೊಂಡಿರುತ್ತಾರೆ. ಹಾಗಾಗಿ ಶಿಷ್ಯರ ಮನದ ತಾಪಗಳಿಗೆ ಉಪಶಮನವನ್ನು ಅನುಗ್ರಹಿಸುತ್ತಾರೆ. ಇಂಥವರು ದೊರಕುವುದು ದುರ್ಲಭ.



ಜಿ.ಪಿ. ರಾಜರತ್ನಂ ಈ ಮೂರನೆಯ ಗುಂಪಿಗೆ ಸೇರುವಂತಹವರಾಗಿದ್ದರು. ಅವರು ಹುಟ್ಟಾಗುರುಗಳು. 'ಗುರುತನ' ಅವರಿಗೆ ವಂಶಪಾರಂಪರ್ಯವಾಗಿ ಬಂದ ಬಳುವಳಿಯಾಗಿತ್ತು. ಅವರ ತಂದೆ ಗೋಪಾಲಕೃಷ್ಣಯ್ಯಂಗಾರ್. ಮೈಸೂರು ಸೀಮೆಯಲ್ಲಿ ಆ ಕಾಲದಲ್ಲಿ ಹೆಸರಾಂತ ಉಪಾಧ್ಯಾಯರು. ಮಾಧ್ಯಮಿಕ ಶಾಲಾ ಶಿಕ್ಷಕರು. ಅವರ ಅಣ್ಣಂದಿರು ಹಾಗೂ ಹಿರಿಯ ಮಗ (ಜಿ.ಪಿ.ಯವರ ಅಣ್ಣ) ಸಹ ಶಿಕ್ಷಕರೇ.

ರಾಜರತ್ನಂ ಅವರು ಅಧಿಕಾರ, ಸ್ಥಾನಗಳಿಗೆ ಆಸೆ ಪಡಲಿಲ್ಲ. ತಾವು ಬೌದ್ಧಿಕವಾಗಿ ಬೆಳೆಯುವುದರ ಜೊತೆಗೆ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ಇತರರು ಬೆಳೆಯಬೇಕೆಂದು ಆಶಿಸಿದರು. ಶಿಷ್ಯರೇ ಇರಲಿ, ಯಾರೇ ಇರಲಿ, ತಮ್ಮ ನೆರವನ್ನು ಕೇಳಲು ಬಂದವರಿಗೆ ಅವರ ಓರೆಕೋರೆಗಳನ್ನು ತಿದ್ದಿಕೊಳ್ಳಲು ನೆರವಾಗುತ್ತಿದ್ದರು. ಎಲ್ಲರ ಹಿತವನ್ನು ಬಯಸಿದವರು. ತಪ್ಪು ಮಾಡಿದವರನ್ನು ಛೇಡಿಸಿದರೂ ವಾತ್ಸಲ್ಯದಿಂದ ಕೈಹಿಡಿದು ತಿದ್ದಿಕೊಳ್ಳುವಂತೆ ಮಾಡುತ್ತಿದ್ದರು. ಅವರದು ಕಂಚಿನ ಕಂಠ. ಮಾತು ಮಧುರ, ಗಂಭೀರ. ಕೇಳುವವರ ಮನಸ್ಸನ್ನು ಹಿಡಿದು ನಿಲ್ಲಿಸುವ ಶಕ್ತಿ ಆ ಧ್ವನಿಯಲ್ಲಿತ್ತು. 'ಮಕ್ಕಳ ರಾಜರತ್ನಂ' ಎಂದೇ ಖ್ಯಾತರಾಗಿದ್ದವರು. ಅವರ ಶಿಶುಸಾಹಿತ್ಯ ಅವರ ಮಕ್ಕಳ ಬಗೆಗಿನ ಅಕ್ಕರೆಗೆ ಸಾಕ್ಷಿ.

ರಾಜರತ್ನಂ ವಿಶ್ವವಿದ್ಯಾಲಯದಲ್ಲಿ ಕನ್ನಡ ಪಂಡಿತರಾಗಿದ್ದರು. 26 ವರ್ಷಗಳ ಅವರ 'ಮೇಷ್ಟ್ರುಗಿರಿ'– ಗುರುತನ ಅಲ್ಲಿಗೆ ಮಾತ್ರ ಸೀಮಿತವಾಗಿರಲಿಲ್ಲ. ಕಾಲೇಜಿನ ಹೊರಗೆ ತಮ್ಮ ಪ್ರವೃತ್ತಿಯಲ್ಲಿ ಕೂಡ ಗುರುತನದ ಕಾರ್ಯವನ್ನು ನಿರ್ವಹಿಸಿದರು. ಜ್ಞಾನದ ಬೆಳಕನ್ನು ತೋರಿದರು. ಅವರ ಬರಹಗಳಲ್ಲಿ, ಭಾಷಣಗಳಲ್ಲಿ ಎಲ್ಲ ಕಡೆ ಏನಾದರೂ ಸಂದೇಶ, ಏನಾದರೂ ಮೌಲ್ಯ ಇದ್ದೇ ಇರುತ್ತಿತ್ತು.

ರಾಜರತ್ನಂ ಅವರ ಪಾಠಗಳನ್ನು ಕೇಳಿದವರಿಗೇ ಗೊತ್ತು ಅದರ ಮೌಲ್ಯ. ಆ ದಿಟ್ಟ ನಿಲುವು, ಆ ಕಂಚಿನಕಂಠದ ಮೊಳಗು, ಆ ವ್ಯಾಖ್ಯಾನ ವಿಜೃಂಭಣೆ, ಆ ಗತ್ತು, ಶಬ್ದಗಳ ಮೇಲೆ ಕೊಡುತ್ತಿದ್ದ ಒತ್ತು, ಸ್ಪಷ್ಟ ಉಚ್ಚಾರಣೆ, ಆ ಉದಾಹರಣೆಗಳು ಎಲ್ಲವೂ ವರ್ಣನೆಗೆ ಮೀರಿದ್ದು. ಅನುಭವಕ್ಕೆ ಮಾತ್ರ ವೇದ್ಯ. ಅದನ್ನು ಪಡೆದುಕೊಂಡವರು ರಾಜರತ್ನಂ ಅವರಲ್ಲಿ ತಮಗೆ ದೊರತ ಶಿಷ್ಯತ್ವ ತಮ್ಮ ಬಾಳಿನ ಅಮೂಲ್ಯ, ಅಸದೃಶ ಅನುಭವ ಎಂದು ಭಾವಿಸುತ್ತಾರೆ. 'ಸಾರ್ಥಕವಾಯಿತು' ಎಂಬ ಧನ್ಯತಾಭಾವ ಅನುಭವಿಸುತ್ತಾರೆ.

ರಾಜರತ್ನಂ ತಮ್ಮ ಶಿಷ್ಯರೊಬ್ಬರಿಗೆ ಕಾಲೇಜು ಅಧ್ಯಾಪಕ ಉದ್ಯೋಗ ದೊರೆತಾಗ ಹೇಳಿದ ಕಿವಿಮಾತು.

1. ಒಂದು ಗಂಟೆ ಪಾಠ ಮಾಡಲು ಎರಡು ಗಂಟೆಗೆ ಸಿದ್ಧಮಾಡಿಕೊಂಡಿರು. ತಲೆಬೇಗ ಖಾಲಿಯಾಗಬಾರದು.
2. ಪಾಠಗಳಿಗೆ ಟಿಪ್ಪಣಿ ತಯಾರಿಸಿಕೊ. ಪಾಠ ಆದ ಮೇಲೆ ಅದನ್ನು ಹರಿದು ಹಾಕು. ಅದನ್ನೇ ಇಟ್ಟುಕೊಂಡರೆ ಮತ್ತೆ ಓದುವುದಿಲ್ಲ. ಹೊಸ ಚಿಂತನೆ ಮಾಡುವುದಿಲ್ಲ.
3. ಮೇಷ್ಟ್ರು ನಿಯತ್ತಾಗಿ ಪಾಠ ಹೇಳಬೇಕು. ಪಡೆದ ಸಂಬಳ ಜೀರ್ಣವಾಗಬೇಕು. ವಿದ್ಯಾರ್ಥಿಗಳ ಉತ್ಸಾಹವನ್ನು ಎಂದೂ ಕುಗ್ಗಿಸಬೇಡ. ತರಗತಿ ಮುಗಿದ ಮೇಲೆ, ಬೋರ್ಡ್ ಮೇಲೆ ಬರೆದುದನ್ನು ಅಳಿಸಿ ಹಾಕು.

ಇದು ಕೇವಲ ಪರರಿಗೆ ಮಾಡಿದ ಉಪದೇಶ ಮಾತ್ರವೇ ಆಗಿರಲಿಲ್ಲ. ಅವರ ಪಾಠಕ್ರಮವೇ ಹಾಗಿರುತ್ತಿತ್ತು. ಪಾಠ ಹೇಳುವವರಿಗೆ ಕನಿಷ್ಠ ಇನ್ನೂರಾದರೂ ಪದ್ಯಗಳ ಬಾಯಿಪಾಠ ಆಗಿರಬೇಕೆನ್ನುತ್ತಿದ್ದರು. ಅವರ ಪಾಠ ಕೇಳಿದವರಿಗೆ ಗೊತ್ತು ಅವರಿಗೆ ಎಷ್ಟೊಂದು ಪದ್ಯಗಳ ಕಂಠಸ್ಥ ಮಾತ್ರವೇ ಅಲ್ಲ, ಹೃದಯಸ್ಥವಾಗಿತ್ತು ಎಂದು.

ನಾವೂ ಹೀಗಾಗಬಹುದೇ?

(ಆಧಾರ– ನೀಲತ್ತಳ್ಳಿ ಕಸ್ತೂರಿಯವರ ಲೇಖನ)

# ವಿದ್ಯಾರ್ಥಿಗಳಿಗೆ ಗಾಂಧೀಜಿಯ ಸಂದೇಶ

**ಆರ್. ಸೀತಾಲಕ್ಷ್ಮಿ**
**ಪೋಷಕರು,**
**ಕರ್ನಾಟಕ ರಾಜ್ಯ ಮಾಧ್ಯಮಿಕ**
**ಶಿಕ್ಷಕ ಸಂಘ**



**ಗೌರವಾನ್ವಿತ ಅಧ್ಯಕ್ಷರಾದ ವಿ.ಎಸ್ ಶ್ರೀನಿವಾಸ ಶಾಸ್ತ್ರಿಯವರೇ ಹಾಗೂ ನನ್ನ ಆತ್ಮೀಯ ಗೆಳೆಯರೇ,**

ನೀವು ನನ್ನ ಹಾಗೂ ನನ್ನ ಮಡದಿಯನ್ನು ಹೊಗಳುವ ಭರದಲ್ಲಿ ನನ್ನ ಗುಣಗಳಿಗೆ ಅನೇಕ ವಿಶೇಷಣಗಳನ್ನು ಸೇರಿಸಲು ಇಂಗ್ಲೀಷ್ ಶಬ್ದಕೋಶವನ್ನೇ ಬರಿದು ಮಾಡಿದ್ದೀರಿ. ನನ್ನನ್ನು ಯಾರಾದರೂ ನಿಮಗೆ ಅತ್ಯಂತ ಹೆಚ್ಚಿನ ಗೌರವ, ಪ್ರೀತಿ, ಕಾರುಣ್ಯದ ಆದರಗಳು ಸಿಕ್ಕಿದ್ದೆಲ್ಲಿ ಎಂದು ಕೇಳಿದರೆ ಅದು ಖಂಡಿತ ಮದ್ರಾಸ್ ಎಂದು ಹೇಳುತ್ತೇನೆ. ಮೇಲಾಗಿ ನಾನು ಯಾವ ಸಂಸ್ಥೆಯಲ್ಲಿ ಸಾಮಾಜಿಕ, ರಾಜಕೀಯ ಜೀವನದ ಓನಾಮವನ್ನು ಕಲಿಯಲು ಪ್ರಯತ್ನಿಸಿರುವೆನೋ ಆ 'ಸರ್ವೆಂಟ್ಸ್ ಆಫ್ ಇಂಡಿಯಾ" ಸೊಸೈಟಿಯ ಅಧ್ಯಕ್ಷರೂ, ಇಂದಿನ ಸಭೆಯ ಅಧ್ಯಕ್ಷರೂ ಆದ ಶ್ರೀ ವಿ.ಎಸ್ ಶ್ರೀನಿವಾಸಮೂರ್ತಿಗಳು ನೀವು ಹೇಳಿದ ಎಲ್ಲ ವಿಶೇಷಣಗಳಿಗೆ ಕಿರೀಟವಿಟ್ಟಂತೆ ಉದಾರವಾಗಿ ನನ್ನ ಮೇಲೆ ಕಾರುಣ್ಯದ ಹೊನಲನ್ನು ಹರಿಸಿದ್ದಾರೆ. ನಾನು ಈ ನಿಮ್ಮೆಲ್ಲ ಹೊಗಳಿಕೆಗೆ ಅರ್ಹನೇ ಎಂದರೆ, ನನ್ನ ಅಂತರ್ಮನದ ಆಳದಿಂದ ಬರುವ ಉತ್ತರವೆಂದರೆ 'ಇಲ್ಲ' ಎನ್ನುವುದೇ ಆಗಿದೆ. ನೀವೇನೇನು ವಿಶೇಷಣಗಳನ್ನು ಸೇರಿಸಿ ನನ್ನನ್ನು ಹೊಗಳಿದರೋ ಅದಕ್ಕೆ ತಕ್ಕಂತೆ ಬದುಕಬೇಕು ಮತ್ತು ನನ್ನಿಡೀ ಜೀವನವನ್ನು ಅದನ್ನು ನಿಜ ಮಾಡಲೆಂದೇ ಮುಡಿಪಿಡಬೇಕು ಎಂಬ ಉದ್ದೇಶದಿಂದಲೇ ನಾನು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದಿರುವುದು.

ಇದೀಗ ನೀವು ಭಾರತದ ರಾಷ್ಟ್ರೀಯ ಗೀತೆಯಾದ "ವಂದೇ ಮಾತರಂ" ಅನ್ನು ಸುಶ್ರಾವ್ಯವಾಗಿ ಹಾಡಿದಿರಿ. ಅದನ್ನು ಕೇಳುತ್ತಲೇ ನಾವೆಲ್ಲಾ ಎದ್ದು ನಿಂತೆವು. ಇದನ್ನು ಬರೆದ ಕವಿಯು ತಾಯಿಭಾರತಿಯನ್ನು ಹಸನ್ಮುಖಿ, ಮೃದುಭಾಷಿಣಿ, ಸರ್ವಶಕ್ತಿಶಾಲಿನಿ, ಸತ್ಯವಾದಿನಿ, ಸಸ್ಯಶಾಮಲೆ, ಸುಜಲೆ, ಸುಫಲೆ, ಹಾಲ್ಜೇನುಹರಿಸುವವಳೇ, ಸುಮಧುರಫಲಭರಿತೆ, ಸದಾ ಹಸಿರನ್ನು ಹೊದ್ದಿರುವ ಸುಶೋಭಿತೆ ಎಂದು ಅಪರಿಮಿತ ವಿಶೇಷಣಗಳಿಂದ ಸ್ತುತಿಸಿದ್ದಾನೆ. ಈ ನಾಡನ್ನು, ಹೊನ್ನಯುಗದಲ್ಲಿ ನೆಲಸಿದ ಒಂದು ಶ್ರೇಷ್ಠ ಜನಾಂಗವಾಗಿದ್ದ ಚಿತ್ರವನ್ನು ಬಿಡಿಸಿದ್ದಾನೆ. ಇಡೀ ಜಗತ್ತನ್ನು, ಇಡೀ ಮಾನವ ಜನಾಂಗವನ್ನು ತನ್ನ ಬಾಹುಬಲದಿಂದ ಜಯಿಸದೆ ಕೇವಲ ತನ್ನ ಆತ್ಮಶಕ್ತಿಯಿಂದ ಆಲಂಗಿಸಿರುವ ಭವ್ಯ ಚಿತ್ರದಂತೆ ಕಟ್ಟಿ ಕೊಡುತ್ತಾನೆ. ನಾವು ಆ ಮಂತ್ರವನ್ನು ಹಾಡಬಹುದೇ? "ಅದನ್ನು ಕೇಳಿದ ಕೂಡಲೇ ಕುಣಿದಾಡಬಹುದೇ" ಎಂದು ನನಗೆ ನಾನೇ ಕೇಳಿಕೊಳ್ಳುತ್ತೇನೆ.

'ವಂದೇ ಮಾತರಂ' ಕವಿಯು ಅದರ ಸಾಕ್ಷಾತ್ಕಾರಕ್ಕಾಗಿ ಒಂದು ಚಿತ್ರವನ್ನು ಕಟ್ಟಿಕೊಟ್ಟಿದ್ದಾನೆ. ಆ ಶಬ್ದಗಳು ಒಂದು ಭವಿಷ್ಯವಾಣಿಯಾಗಿದೆ. ಇದೀಗ ನೀವು ಭವಿಷ್ಯತ್ ಭಾರತದ ಆಶಾಕಿರಣಗಳು. ಆ ನಮ್ಮ ತಾಯಿಯ ಸ್ತುತಿಯನ್ನು ಮಾಡಿರುವ ಮಂತ್ರದ ಪ್ರತಿಶಬ್ದವನ್ನು ನಿಜವನ್ನಾಗಿ ಮಾಡಬೇಕಿದೆ. ಆದರೆ ಇಂದು ಕವಿಯು ಉಪಯೋಗಿಸಿರುವ ಎಲ್ಲ ವಿಶೇಷಣಗಳನ್ನು ನಾವು ಮರೆತಿದ್ದೀವಿ ಎಂದು ನನಗನಿಸುತ್ತದೆ. ಆದ್ದರಿಂದ ಕವಿಯು ಭಾರತ ಮಾತೆಯ ಪರವಾಗಿ ಮಾಡಿರುವ ಈ ಎಲ್ಲ ಸುಂದರ ಕಲ್ಪನೆಯನ್ನು ನೈಜ ರೂಪಕ್ಕೆ ತರುವ ಹೊಣೆಯನ್ನು ನಾನು ಮತ್ತು ನೀವು ಹೊರಬೇಕಿದೆ.

**ನೈಜ ಶಿಕ್ಷಣ:** "ಹೇ ಮದ್ರಾಸಿನ ಹಾಗೂ ಭಾರತದ ಎಲ್ಲಾ ವಿದ್ಯಾರ್ಥಿಗಳೇ ನೀವೆಲ್ಲ ಆ ಗುರಿಯನ್ನು ಮುಟ್ಟುವ ಹಾಗೂ ನಿಮ್ಮಲ್ಲಿ ಹುದುಗಿರುವ ಶಕ್ತಿಯನ್ನು ಹೊರಗೆಳೆಯುವ ಶಿಕ್ಷಣವನ್ನು ಪಡೆಯುತ್ತಿರುವಿರಾ? ಅಥವಾ ನಿಮ್ಮ ಶಿಕ್ಷಣವು ನಿಮ್ಮನ್ನು ಸರ್ಕಾರಿ ನೌಕರರನ್ನಾಗಿಸುವ ಅಥವಾ ಕಛೇರಿಗಳಲ್ಲಿ ಕಾರಕೂನರನ್ನಾಗಿಸುವ ಕಾರ್ಖಾನೆಗಳಾಗಿಲ್ಲವೇ? ನಿಮ್ಮ ಶಿಕ್ಷಣದ ಗುರಿ ಕೇವಲ ನಿಮ್ಮನ್ನು ವಿವಿಧ ಇಲಾಖೆಗಳಲ್ಲಿ ನೌಕರರನ್ನಾಗಿಸುವುದೇ? ಇದೇ ನಿಮ್ಮ ಶಿಕ್ಷಣದ ಗುರಿಯಾಗಿದ್ದಲ್ಲಿ ಆ ಮಹಾನ್ ಕವಿಯು ತಾನು ಕಲ್ಪಿಸಿಕೊಂಡಿದ್ದ ಆ ಭಾರತಮಾತೆಯ ಚಿತ್ರವನ್ನು ನಾವು ಖಂಡಿತ ಸಾಕ್ಷಾತ್ಕರಿಸಲಾರೆವು ಎಂಬ ಹೆದರಿಕೆ ನನಗುಂಟಾಗುತ್ತಿದೆ. ಈ ಮಾತುಗಳಿಂದ ಅಥವಾ ನನ್ನ ಬರಹಗಳನ್ನು ಓದಿ, ನೀವು ನನ್ನನ್ನು ಆಧುನಿಕತೆಯ ವಿರೋಧಿ ಎಂದು ಖಂಡಿತ ಭಾವಿಸಬಹುದು. ಆದರೆ ಇಂದು ನೀವೊಮ್ಮೆ ಯುರೋಪಿನ ಕಡೆ ಕಣ್ತೆರೆದು ನೋಡಿ. ಅದು ಆಧುನಿಕ ನಾಗರೀಕತೆಯ ತುಳಿತದಲ್ಲಿ ಯಾವ ರೀತಿ ನರಳುತ್ತಿದೆ ಎಂಬುದನ್ನು ಅರಿತರೆ ನೀವು ಮತ್ತು ನಿಮ್ಮ ಹಿರಿಯರು ಅದೇ ನಾಗರೀಕತೆಯನ್ನು ನಮ್ಮ ಮಾತೃಭೂಮಿಯಲ್ಲೂ ಅನುಸರಿಸಬೇಕೆ ಎಂದು ಎರಡೆರಡು ಬಾರಿ ಯೋಚಿಸುವಿರಿ. ನಮ್ಮನ್ನು ಆಳುತ್ತಿರವವರು ಅದೇ ನಾಗರೀಕತೆಯನ್ನು ಇಲ್ಲಿಗೆ ತಂದರೆ ನಾವೇನು ಮಾಡುವುದು? ಎಂದು ಕೇಳುತ್ತಾರೆ. ನಾನೀವಾದವನ್ನು ಒಪ್ಪಲಾರೆ. ನೀವಿದನ್ನು ಅಪ್ಪಿಕೊಳ್ಳಲು ಸಿದ್ಧರಾಗಿದ್ದಾಗ ಅವರಾದರೂ ಅದನ್ನು ಹೇಗೆ ತರದೆ ಇದ್ದಾರು? ಆ ರೀತಿ ನಮ್ಮನ್ನಾಳುತ್ತಿದ್ದಾರೆ ಎಂಬುದನ್ನು ನಾನು ಅನೇಕ ವೇದಿಕೆಗಳಲ್ಲಿ ಹೇಳಿದ್ದೇನೆ. ಅವರೇಕೆ ಇಲ್ಲಿದ್ದಾರೆ ಅದಕ್ಕೆ ಕಾರಣವೇನು? ಎಂಬ ಚರ್ಚೆಗೆ ನಾನೀಗ ಹೋಗುವುದಿಲ್ಲ. ಆದರೆ ನೀವು ಕೇಳಿದ ನಮ್ಮ ಅಧ್ಯಕ್ಷರ ಮಾತಿನಂತೆ ಭಾರತವು ನನ್ನ ಋಷಿ ಪರಂಪರೆಯ ನಂಬಿಕೆಗನುಗುಣವಾಗಿ ನಮ್ಮ ಈ ಶ್ರೇಷ್ಠ ಜನಾಂಗದ ಸಂದೇಶವಾದ ಪ್ರೀತಿ, ಪ್ರೇಮಗಳಿಂದ, ಆಧ್ಯಾತ್ಮಿಕ ವರ್ಚಸ್ಸಿನಿಂದ ಗೆದ್ದವನನ್ನೇ ಗೆಲ್ಲುವ ಸಾಮರ್ಥ್ಯ ನಿಮಗೆ ಬರುವುದು ನಿಶ್ಚಿತ. ನಮ್ಮ ಧರ್ಮವು ಅಹಿಂಸೆಯ ಆಧಾರದ ಮೇಲೆ ನಿಂತಿದೆ. ಅದರ ಸಕ್ರಿಯ ರೂಪವೆಂದರೆ ಪ್ರೀತಿಯಲ್ಲದೆ ಮತ್ತೇನೂ ಅಲ್ಲ.

ನಿಮ್ಮ ನೆರೆಹೊರೆಯವರನ್ನು ನಿಮ್ಮ ಗೆಳೆಯರನ್ನು ಪ್ರೀತಿಸುವಷ್ಟೇ ನಿಮ್ಮ ಶತ್ರುಗಳನ್ನು ಪ್ರೀತಿಸಿ. ಆದರೊಂದು ಮಾತು ನಾವು ಸತ್ಯವ್ರತವನ್ನು, ಅಹಿಂಸಾವ್ರತವನ್ನು ಆಚರಿಸಬೇಕಾದರೆ ನಾವು ನಿರ್ಭಯತ್ವವನ್ನೂ ಆಚರಿಸಬೇಕು. ನಮ್ಮನ್ನು ಆಳುವವರು ಅನ್ಯಾಯವನ್ನು ಮಾಡುತ್ತಿದ್ದಾರೆ ಎನಿಸಿದಾಗ, ಅವರು ರಾಜದ್ರೋಹ ಎಂದು ಭಾವಿಸಿದರೂ ಸರಿ ಅದನ್ನೂ ಅವರಿಗೆ ತಿಳಿಹೇಳುವುದು. ಈ ಪ್ರಯತ್ನದಲ್ಲಿ ಅದರ ಪರಿಣಾಮವನ್ನು ಚಿಂತಿಸದೆ ನಾವು ಕಷ್ಟವನ್ನು ಅನುಭವಿಸಬೇಕಾಗಿ ಬಂದರೂ ಅದನ್ನು ಪ್ರತಿಭಟಿಸುವುದು ನಮ್ಮ ಕರ್ತವ್ಯ. ಹಾಗಾದಾಗ ಸರ್ಕಾರವೂ ಕೂಡ ನಮಗೆ ಬಾಗುತ್ತದೆ".

ಹಕ್ಕು ಮತ್ತು ಕರ್ತವ್ಯ: ಬ್ರಿಟಿಷ್ ಸಾಮ್ರಾಜ್ಯದ ಆಡಳಿತದಲ್ಲಿ ಸಮಾನಹಕ್ಕು ಸ್ಥಾಪಿಸಲು ನನಗೆ ಸಾಧ್ಯವಿರುವುದರಿಂದ ಅವರೊಂದಿಗೆ ಗೆಳೆತನ ಬೆಳೆಸುತ್ತೇನೆ. ನಾನು ಆಳಿಸಿಕೊಳ್ಳುವವನೆಂದು ಭಾವಿಸುವುದಿಲ್ಲ. ಬ್ರಿಟಿಷ್ ಗೌರ್ನರ್‌ನಿಂದ ಪಡೆಯುವುದಲ್ಲ ಬದಲಿಗೆ ತೆಗೆದುಕೊಳ್ಳುವುದು ನಮ್ಮ ಹಕ್ಕು. ಮಾಕ್ಸ್‌ಮುಲ್ಲರ್ ನಮ್ಮ ಧರ್ಮವನ್ನು ಕುರಿತು ಹೇಳಿರುವಂತೆ ಅದು ನಮಗೆ 'ಖ–ಋ–ಉ–ಊ–ಖಿ' ಎಂಬ 5 ಅಕ್ಷರಗಳನ್ನಲ್ಲ. ಬದಲಿಗೆ 'ಆ–ಗ–ಖಿ–ಜ' ಎಂಬ 4 ಅಕ್ಷರಗಳನ್ನು ಬೋಧಿಸುತ್ತದೆ. ಯಾವಾಗಲೂ 'ಕರ್ತವ್ಯ' ಎಂಬುದನ್ನು ಚಿಂತಿಸಿ ಅದರಂತೆ ಹೋರಾಡಿ. 'ನೀವು ದೇವರಲ್ಲದೇ ಮತ್ಯಾರಿಗೂ ಅಂಜಬೇಕಿಲ್ಲ'. ಈ ಮಂತ್ರವನ್ನೇ ನನಗೂ ನಿಮಗೂ ಗುರುಗಳಾದ ಮಾನ್ಯ ಗೋಖಲೆಯವರು ನಮಗೆ ನೀಡಿರುವುದು.

**ಪುಟ 10 ಕ್ಕೆ ➢**

# ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಶ್ರೀ ಜೆ. ಪಿ. ಸಿಂಘಾಲರವರ ದೃಷ್ಟಿಕೋನ

➢ ಹಿಂದಿನ ಸಂಚಿಕೆಯಿಂದ...

ಡಾ. ಶಿಲ್ಪಾ ಚರಂತಿಮಠ
ಸರಕಾರಿ ಪ್ರೌಢಶಾಲೆ ಹತ್ತರವಾಟ, ತಾ : ಚಿಕ್ಕೋಡಿ, ಶೈ. ಜಿ: ಚಿಕ್ಕೋಡಿ

ವಿದ್ಯಾರ್ಥಿಗಳಿಗೆ ಇವುಗಳನ್ನು ಅರ್ಥೈಸಿಕೊಳ್ಳುವಂತೆ ಸಹಕರಿಸಿದರೆ 2025 ರ ವರೆಗೆ ಶೇಕಡಾ 100 ರಷ್ಟು ಸಾಕ್ಷರತೆ ಮತ್ತು ಗಣಿತಜ್ಞತೆ ಹೊಂದಲು ಈ ನೀತಿ ಸಹಕಾರಿಯಾಗುವುದು. ಈ ಕಾರ್ಯವನ್ನೇ ಮೊದಲು ಮಾಡಬೇಕಾಗಿದೆ. ವಿದ್ಯಾರ್ಥಿಗಳನ್ನು ಗಣಿತ, ಭಾಷಾ ಕೌಶಲ್ಯಗಳಲ್ಲಿ ಯೋಗ್ಯರನ್ನಾಗಿ ಮಾಡುವ ಮಾತು ಇದರಲ್ಲಿ ಉಲ್ಲೇಖಿತವಾಗಿದೆ. ಎರಡನೇಯದಾಗಿ ಕಂಠಪಾಠ ಮಾಡುವ ಪದ್ಧತಿಯಿಂದ ಅರ್ಥೈಸಿಕೊಂಡು ಓದುವ ಪದ್ಧತಿಯ ರೂಢಿಗತ ವಾಗಬೇಕು. ವಿಷಯದ ಮೇಲೆ ಪ್ರಭುತ್ವ ಸಾಧಿಸಬೇಕು. ವಿದ್ಯಾರ್ಥಿಯು ತನ್ನೆಲ್ಲ ಶ್ರಮ ಹಾಗೂ ಸಮಯವನ್ನು ಬಾಯಿಪಾಠ ಮಾಡುವುದರಲ್ಲಿ ಕಳೆಯುತ್ತಿದ್ದ. ಈಗ ವಿಷಯವಸ್ತುವಿನ ಮೇಲೆ ಪ್ರಭುತ್ವ ಸಾಧಿಸಬೇಕಾಗಿದೆ. ಹಾಗೂ ಈ ಮೂಲಕವೇ ಹೆಚ್ಚು ಅಂಕಗಳನ್ನು ಪಡೆಯಬೇಕಾಗಿದೆ. ಒಂದು ಚರ್ಚೆಯಲ್ಲಿ CBSE ಯ ವಿದ್ಯಾರ್ಥಿಗೆ ಶೇಕಡಾ 100% ರಷ್ಟು ಅಂಕಗಳು ಬಂದಿರುವುದು, ಗಣಿತಕ್ಕಷ್ಟೇ ಅಲ್ಲದೇ ಹಿಂದಿ ಹಾಗೂ ಇತಿಹಾಸದಲ್ಲಿಯೂ 100 ಕ್ಕೆ 100 ರಷ್ಟು ಅಂಕಗಳು ಬಂದಿರುವುದರ ಬಗ್ಗೆ ಬೆಳಕು ಬೀರಿದಾಗ ಅನೇಕ ವಿದ್ಯಾರ್ಥಿಗಳು ಇಂದು ಈ ತರಹದ ಅಂಕಗಳನ್ನು ಗಳಿಸುತ್ತಿರುವುದು ಬೆಳಕಿಗೆ ಬಂತು. ಇದು ಇಲಿ ಓಟಕ್ಕೆ ಉದಾಹರಣೆಯಾಗಿದೆ. ಕೇಂದ್ರೀಯ ವಿದ್ಯಾಲಯಗಳಲ್ಲಿ ಈ ರೀತಿಯ ಅಂಕಗಳು ಬರುತ್ತಿರುವುದನ್ನು ಕಂಡು ರಾಜ್ಯ ಮಂಡಳಿಗಳೂ ಈ ಇಲಿ ಓಟದಲ್ಲಿ ಭಾಗವಹಿಸಹತ್ತಿದವು. ಕಂಠಪಾಠ ಮಾಡಿ ಹೆಚ್ಚು ಅಂಕಗಳಿಸುವುದು ಹೆಚ್ಚಾಯಿತು. ಇದನ್ನು ತಡೆಯುವುದು ಅವಶ್ಯಕವಾಗಿದೆ. ಅದಕ್ಕಾಗಿಯೇ ನಾವು ಬಾಯಿಪಾಠ ಮಾಡುವ ಪದ್ಧತಿಯನ್ನು ಕೈಬಿಟ್ಟು ಅರ್ಥೈಸಿಕೊಂಡು ಓದುವುದರ ಕಡೆಗೆ ಹೆಚ್ಚು ಒತ್ತು ಕೊಡಹತ್ತಿದೆವು. ವಿದ್ಯಾರ್ಥಿಗಳ ಮೆದುಳಿನಲ್ಲಿ ಅರ್ಥೈಸಿಕೊಳ್ಳುವ ಮನೋಭಾವ ಬೆಳೆಸಬೇಕಿದೆ. ಆದರೆ ಹೇಗೆ? ಅದಕ್ಕಾಗಿ ಮೊದಲಿಗೆ ಈ ವ್ಯವಸ್ಥೆಯನ್ನು ಬದಲಿಸಬೇಕು, ನಮ್ಮ ಶಾಲೆಗಳ ಶೈಕ್ಷಣಿಕ ವ್ಯವಸ್ಥೆ ಅಂದರೆ ಮೊದಲು ನಮ್ಮಲ್ಲಿ 10+ 2 ಯೋಜನೆ ಇತ್ತು, ಈಗ 5+3+3+4 ಯೋಜನೆಯನ್ನು ತರಲಾಗಿದೆ. ಈ ವ್ಯವಸ್ಥೆಯಲ್ಲಿ ಒಂದು ಮಗು 3 ವರ್ಷ ವಯಸ್ಸಾದಾಗ ಶಾಲೆಗೆ ಹೋಗಿ ಔಪಚಾರಿಕ ಶಿಕ್ಷಣ ಪಡೆಯಲು ಅರ್ಹನಾಗುತ್ತಾನೆ. ಮೊದಲ 5 ವರ್ಷಗಳನ್ನು ತಳಹದಿಯ ಮಟ್ಟವೆಂದು ಕರೆಯಲಾಗಿ, ಮೊದಲ 3 ವರ್ಷಗಳು ಮತ್ತು 1ನೇ, 2ನೇ ತರಗತಿಯ ಕೂಡಿದ್ದಾಗಿರುತ್ತದೆ. ಮುಂದಿನ 3 ವರ್ಷಗಳು 3ನೇ, 4ನೇ, ಮತ್ತು 5ನೇ ತರಗತಿಗಳಾಗಿರುತ್ತವೆ. ಮುಂದಿನ 3ವರ್ಷಗಳು 6ನೇ, 7ನೇ, ಮತ್ತು 8ನೇ ತರಗತಿಗಳಾಗಿರುತ್ತವೆ. ಮುಂದಿನ 4ವರ್ಷಗಳು 9ನೇ, 10ನೇ, 11ನೇ ಮತ್ತು 12ನೇ ತರಗತಿಗಳಾಗಿರುತ್ತವೆ. ಮೊದಲಿನ ಮಟ್ಟಕ್ಕೆ ತಳಹದಿಯ ಮಟ್ಟ, ಎರಡನೇಯದಕ್ಕೆ ಪೂರ್ವಸಿದ್ಧತಾ ಮಟ್ಟ, ಮೂರನೇಯದಕ್ಕೆ ಪ್ರಾಥಮಿಕ ಮಟ್ಟ, ನಾಲ್ಕನೇಯದಕ್ಕೆ ಪ್ರೌಢ ಮಟ್ಟವೆಂದು ಕರೆಯಲಾಗಿದೆ. ಈ ರಚನೆಯನ್ನಷ್ಟೇ ಬದಲಾಯಿಸಲಿಲ್ಲ ಜೊತೆಗೆ ಶಿಕ್ಷಣಶಾಸ್ತ್ರವನ್ನು, ಪಠ್ಯಕ್ರಮವನ್ನು ಬದಲಾಯಿಸುವುದು ಅವಶ್ಯಕವಾಗಿತ್ತು. ಇದರ ಉದ್ದೇಶವು ಸದರಿ ಮಟ್ಟದ ಮಗುವಿನ ಕಲಿಕೆಗೆ ಈ ಅಂಶಗಳು ಪೂರಕವಾಗಿರಬೇಕು. ಆಯಾ ಮಟ್ಟಕ್ಕನುಗುಣವಾಗಿ ಶಿಕ್ಷಣಶಾಸ್ತ್ರವು, ಆಯಾ ಮಟ್ಟಕ್ಕನುಗುಣವಾಗಿ ಪಾಠ್ಯಕ್ರಮವು, ಆಯಾ ಮಟ್ಟಕ್ಕನುಗುಣವಾಗಿ ನಮ್ಮ ವಿಷಯಗಳು ಇರುವಂತೆ ಪ್ರಯತ್ನಿಸಲಾಗಿದೆ. ಇಲ್ಲಿ ಉದ್ದೇಶವು ಶಿಶು ಕೇಂದ್ರಿತ ಶಿಕ್ಷಣದ ವ್ಯವಸ್ಥೆಯನ್ನು ತರುವುದಾಗಿದೆ. ಇಲ್ಲಿ ನಾಲ್ಕೂ ಮಟ್ಟಗಳ ಶಿಕ್ಷಣಶಾಸ್ತ್ರ, ಪಾಠ್ಯಕ್ರಮ ಬೇರೆ–ಬೇರೆಯಾಗಿರುತ್ತದೆ.

ತಳಹದಿಯ ಮಟ್ಟದಲ್ಲಿ ಚಟುವಟಿಕೆ ಆಧರಿತ ಬೋಧನೆಗೆ ಮಹತ್ವ ಕೊಡುತ್ತಿದ್ದು ಆಟಕ್ಕೆ ಪ್ರೋತ್ಸಾಹಿಸುವಂತಿರುತ್ತದೆ. ಪೂರ್ವಸಿದ್ಧತಾ ಮಟ್ಟದಲ್ಲಿ ಚಟುವಟಿಕೆ ಹಾಗೂ ಆಟದ ಜೊತೆಗೆ ಸಂಶೋಧನಾತ್ಮಕ ಕಲಿಕೆಗೆ ಹಾಗೂ ಚರ್ಚಾತ್ಮಕ ಕಲಿಕಾ ವಿಧಾನಕ್ಕೆ ಪ್ರೋತ್ಸಾಹವಿರುತ್ತದೆ. ಪ್ರಾಥಮಿಕ ಮಟ್ಟದಲ್ಲಿ ಅರ್ಥೈಸಿಕೊಳ್ಳುವುದಕ್ಕೆ ಮಹತ್ವ ನೀಡಲಾಗಿದೆ ಹಾಗೂ ಅನುಭವದಿಂದ ಕಲಿಕೆಯನ್ನು ಪ್ರೋತ್ಸಾಹಿಸಲಾಗಿದೆ. ಅವರಿಗೆ ಅಮೂರ್ತ ಪರಿಕಲ್ಪನೆಯನ್ನು ಕೊಡಲಾಗುವುದು. ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಪ್ರಾಮುಖ್ಯತೆ ಕೊಡಲಾಗುವುದು. ಪ್ರೌಢಶಾಲಾ ಮಟ್ಟದಲ್ಲಿ ವಿಷಯಾಧಾರಿತ ಕಲಿಕೆ ಇದ್ದು, ಇಲ್ಲಿ ಅವರಿಗೆ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಅವರ ಮಟ್ಟಕ್ಕೆ ತಕ್ಕಂತಹ ಶಿಕ್ಷಣಶಾಸ್ತ್ರ ಹಾಗೂ ಪಠ್ಯಕ್ರಮವನ್ನು ಇಲ್ಲಿ ಅಳವಡಿಸಲಾಗುವುದು. ಹೀಗೆ ನಾಲ್ಕೂ ಮಟ್ಟಗಳಲ್ಲಿ ಬೇರೆ–ಬೇರೆ ಪಠ್ಯಕ್ರಮವಿದ್ದು ಇದು ಆವಶ್ಯಕತೆಗನುಸಾರವಾಗಿ ಇರುವುದಲ್ಲದೇ ಆನಂದ ತುಂಬುವಂತಿರುತ್ತದೆ. ಇದನ್ನು ಮಕ್ಕಳು ಆಸ್ವಾದಿಸುವಂತಿರುತ್ತದೆ. ಕಲಿಕೆಯು ಬರೀ ಕಲಿಕೆಯಾಗಿರದೇ ಆನಂದಭರಿತವೂ ಆಗಿರುತ್ತದೆ. ಈ ರೀತಿಯಾದಂತಹ ಶಿಕ್ಷಣ ನೀತಿಯು ಬರಲಿದ್ದು ಇದು ಬೇರೆ–ಬೇರೆ ರಾಜ್ಯಗಳಲ್ಲಿ ಬೇರೆ–ಬೇರೆಯಾಗಿರುತ್ತದೆ.

ಇದರಲ್ಲಿ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ನಮ್ಯತೆಯಿರುತ್ತದೆ. ವಿದ್ಯಾರ್ಥಿಗೆ ತನ್ನ ಇಷ್ಟಕ್ಕೆ ತಕ್ಕಂತಹ ಕೋರ್ಸನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಹತ್ತನೇಯ ತರಗತಿಯ ನಂತರ ವಿಜ್ಞಾನ ವಿಷಯ ಓದಬೇಕಾದರೆ ಗಣಿತ, ಭೌತಶಾಸ್ತ್ರ, ಜೀವಶಾಸ್ತ್ರ, ರಸಾಯನಶಾಸ್ತ್ರ ಓದಬೇಕೆಂಬ ನಿರ್ಬಂಧವಿಲ್ಲ. ಅನೇಕಾನೇಕ ವಿಷಯಗಳಿರುತ್ತವೆ. ಮಕ್ಕಳು ತಮಗಿಷ್ಟವಿರುವ, ತಮಗೆ ಆಸಕ್ತಿಯಿರುವ ವಿಷಯಗಳನ್ನು ಆರಿಸಿಕೊಳ್ಳಬಹುದು. ಭಾರತದ ಕಲೆಯನ್ನು ಪ್ರೋತ್ಸಾಹಿಸುವ ಪ್ರಯತ್ನವಿದೆ. ಭಾರತದ ಆಟಗಳಿಗೆ ಹೆಚ್ಚು ಒತ್ತು ಕೊಡಲಾಗುವುದು. ಭಾರತದ ಹಳ್ಳಿಗಳಲ್ಲಿರುವ ಆಟ–ಪಾಠಗಳ ಪರಿಚಯವೂ ಆಗುವುದು ಮತ್ತು ದೈಹಿಕವಾಗಿ ಆರೋಗ್ಯಪೂರ್ಣ ಮತ್ತು ಸದೃಢರಾಗಬೇಕು.

ಇಲ್ಲಿಯವರೆಗೆ ಸಹಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು ಮುಖ್ಯ ವಿಷಯಕ್ಕೆ ಹೊರತಾಗಿದ್ದವು. ಇವನ್ನು ಮುಖ್ಯ ವಿಷಯಕ್ಕೆ ಜೋಡಿಸದೇ ಪ್ರತ್ಯೇಕವಾಗಿ ಇಡಲಾಗುತ್ತಿತ್ತು. ಒಬ್ಬ ವಿದ್ಯಾರ್ಥಿಯು ವೃತ್ತಿಪರ ಕೋರ್ಸನ್ನು ಮಾಡಿದರೆ ಕೆಲಸ ಸಿಗುತ್ತಿರಲಿಲ್ಲ. ಗಣಿತ–ವಿಜ್ಞಾನ ವಿಷಯಗಳನ್ನು ಓದಿದ ವಿದ್ಯಾರ್ಥಿಗಳಿಗೆ ಹೆಚ್ಚು ಮಹತ್ವ ಕೊಡಲಾಗುತ್ತಿತ್ತು. ಆದರೆ ಹೊಸ ಶಿಕ್ಷಣ ನೀತಿ 2020 ರಲ್ಲಿ ಎಲ್ಲರಿಗೂ ಸಮಾನ ಪ್ರಾಮುಖ್ಯತೆಯಿದ್ದು ಯಾವುದರಲ್ಲಿಯೂ ಅಂತರವಿರುವುದಿಲ್ಲ. ವಿದ್ಯಾರ್ಥಿಯು ಬೇಕಾದರೆ, ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸಲಿ, ವೃತ್ತಿಪರ ಕೋರ್ಸನ್ನು ಕಲಿಯಲಿ, ಆಟ–ಪಾಠಗಳನ್ನು ಆರಿಸಿಕೊಳ್ಳಲಿ ಎಲ್ಲಕ್ಕೂ ಸಮಾನ ಮಹತ್ವವಿರುತ್ತದೆ. ಯಾವುದೇ ಅಂತರವಿರುವುದಿಲ್ಲ. 6ನೇ ತರಗತಿಯಿಂದಲೇ ವಿದ್ಯಾರ್ಥಿಯು ವೃತ್ತಿಪರ

ಪುಟ 9 ಕ್ಕೆ ➢

➢ ಪುಟ 8 ರಿಂದ.....

ಕೋರ್ಸನ್ನು ಕಲಿಯಲೇಬೇಕಾಗುತ್ತದೆ. ಇದರಿಂದ ಅವನು ಸ್ಥಾನೀಯ ಉದ್ಯೋಗವನ್ನು ಕಲಿತುಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಯನ್ನು ಕಲಾ ವಿದ್ಯಾರ್ಥಿ, ವಿಜ್ಞಾನದ ವಿದ್ಯಾರ್ಥಿ, ವಾಣಿಜ್ಯ ವಿದ್ಯಾರ್ಥಿಯೆಂದು ಬೇರ್ಪಡಿಸಲಾಗುವುದಿಲ್ಲ. ಇಲ್ಲಿ ವಿಜ್ಞಾನ ಓದುವ ವಿದ್ಯಾರ್ಥಿ ಕಲಾ ವಿಷಯವನ್ನು ಓದುವ ವಿದ್ಯಾರ್ಥಿಗಿಂತ ಉತ್ತಮನು ಎಂಬ ಭೇದ–ಭಾವವು ಅಳಿಸಿ ಹೋಗುತ್ತದೆ. ಇಲ್ಲಿ ಯಾವುದೇ ನಿರ್ಬಂಧವಿಲ್ಲದೇ ಒಬ್ಬ ವಿದ್ಯಾರ್ಥಿಯು ತನಗೆ ಆಸಕ್ತಿಯಿರುವ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಇಲ್ಲಿಯವರೆಗೆ ಅಂಕಪಟ್ಟಿಯಲ್ಲಿ/ಪ್ರಮಾಣಪತ್ರದಲ್ಲಿ ಎಷ್ಟು ಅಂಕಗಳು ಬಂದಿವೆ, ಎಷ್ಟು ದಿನ ಶಾಲೆಗೆ ಬಂದಿರುವರು, ಟೀಕೆ–ಟಿಪ್ಪಣಿ (ರಿಮಾರ್ಕ) ಇವೆಲ್ಲ ನಮೂದಾಗಿರುತ್ತಿದ್ದವು. ಇದು ಮಗುವಿನ ನಿಜವಾದ ಪ್ರಗತಿಯನ್ನು ಹೇಳುವುದಿಲ್ಲ. ಮಗುವಿನ ತಿಳುವಳಿಕೆಯ/ಅರಿವಿನ ಪ್ರಗತಿ ಎಷ್ಟಾಯಿತು? ತಾತ್ವಿಕ ಪ್ರಗತಿ ಎಷ್ಟಾಯಿತು? ಪರಿಕಲ್ಪನಾ ತಿಳುವಳಿಕೆ ಪ್ರಗತಿ ಎಷ್ಟಾಯಿತು? ವಿಮರ್ಶಾತ್ಮಕ ಚಿಂತನೆ ಎಷ್ಟಾಯಿತು? ದರ್ಶನದ, ಮೌಲ್ಯಗಳ ಜ್ಞಾನವನ್ನು ಎಷ್ಟು ಗ್ರಹಣ ಮಾಡಿದರು? ಇದರ ಮಾಹಿತಿಯು ಅದರಲ್ಲಿ ಇರುತ್ತಿರಲಿಲ್ಲ. ಈಗ 360 ಡಿಗ್ರಿ ಬಹು ಆಯಾಮಗಳುಳ್ಳ ಸಮಗ್ರ ಪ್ರಗತಿ ಪತ್ರವನ್ನು ಕೊಡಲಾಗುವುದು.ಇದರಲ್ಲಿ ಮೇಲಿನ ಅಂಶಗಳು ಒಳಗೊಂಡಿರುತ್ತವೆ. ಇದರಲ್ಲಿ ಸ್ವ ಮೌಲ್ಯಮಾಪನ, ಸಹಪಾಠಿ ಮೌಲ್ಯಮಾಪನ, ಶಿಕ್ಷಕರಿಂದ ಮೌಲ್ಯಮಾಪನ ಮಾಡಿದ ವಿವರವಿರುತ್ತದೆ. ಈ ಪ್ರಗತಿ ಪತ್ರವು ಪಾಲಕರಿಗೆ ಮಗುವಿನ ಆಸಕ್ತಿಗಳನ್ನು ತಿಳಿದುಕೊಳ್ಳುವ ಒಂದು ಐತಿಹಾಸಿಕ ದಾಖಲೆಯಾಗಿರುತ್ತದೆ. ಮಗುವಿನ ಆಸಕ್ತಿ, ಯಾವ ದಿಶೆಯೆಡೆಗೆ ಹೋಗಬಯಸುತ್ತಾನೆ ಎಂಬ ಬಗ್ಗೆ ತಿಳಿದುಕೊಳ್ಳಲು ಸುಲಭವಾಗಿರುತ್ತದೆ. ಇದು ಮಹತ್ವಪೂರ್ಣ ಹಾಗೂ ಪರಿಣಾಮಕಾರಿಯಾಗಿ ಸಿದ್ಧವಾಗುವುದು.

ಶಾಲೆಯ ಭೌತಿಕ ಸೌಲಭ್ಯಗಳ ಬಗ್ಗೆ, ಕಟ್ಟಡದ ಬಗ್ಗೆ ನೋಡಿದಾಗ ಎಲ್ಲ ಶಾಲೆಗಳೂ ಉತ್ತಮ ಮೂಲ ಸೌಕರ್ಯಗಳನ್ನು ಹೊಂದಿಲ್ಲ. ಕೆಲವು ಶಾಲೆಗಳಲ್ಲಿ ಸಂಪನ್ಮೂಲಗಳ ಅಭಾವವಿದೆ. ಕೆಲವು ಕಡೆ ಶಿಕ್ಷಕರಿದ್ದಾರೆ, ಕೆಲವು ಕಡೆಗಳಲ್ಲಿ ಕೊರತೆಯಿದೆ. ಕೆಲವು ಶಿಕ್ಷಕರು ಸಕ್ಷಮರಾಗಿದ್ದಾರೆ, ಕೆಲವು ಶಿಕ್ಷಕರು ಸಕ್ಷಮರಾಗಿಲ್ಲ, ಕೆಲವು ಕಡೆ ಆಟದ ಮೈದಾನವಿಲ್ಲ, ಕ್ರೀಡಾ ಸಾಮಗ್ರಿಗಳಿಲ್ಲ, ಮತ್ತೆ ಕೆಲವು ಕಡೆ ಗ್ರಂಥಾಲಯವಿಲ್ಲ, ಕಂಪ್ಯೂಟರ್ ಇಲ್ಲ, ಅಧುನಿಕ ತಂತ್ರಜ್ಞಾನವಿಲ್ಲ. ಇಂತಹ ಅನೇಕ ಸಂಪನ್ಮೂಲಗಳ ಕೊರತೆಯು ಇದ್ದು, ಇದನ್ನು ನೀಗಿಸಲು ಒಂದು ಹೊಸ ಯೋಜನೆ ತರಲಾಗಿದೆ. ಅದು ಶಾಲಾ ಸಂಕೀರ್ಣವನ್ನು ನಿರ್ಮಾಣ ಮಾಡುವುದು. ಕೆಲವು ಶಾಲೆಗಳು ಉತ್ತಮ ಸೌಲಭ್ಯಗಳನ್ನು ಹೊಂದಿದ್ದು ಅಲ್ಲಿನ ಕಾರ್ಯಕ್ಷಮತೆಯೂ ಉತ್ತಮವಾಗಿದ್ದರೆ 5 ರಿಂದ 10 ಕಿ.ಮೀ. ಅಂತರದಲ್ಲಿರುವ ಇತರ ಕೆಲವು ಶಾಲೆಗಳನ್ನು ಅದರೊಂದಿಗೆ ಸೇರಿಸುವುದು. ಇಲ್ಲಿ ಸಂಪನ್ಮೂಲಗಳ, ಶಿಕ್ಷಕರ ಹಾಗೂ ಇತರ ಸೌಲಭ್ಯಗಳ ವಿನಿಮಯದ ಕಾರ್ಯವಾಗುತ್ತದೆ. ಅಲ್ಲದೇ ಇವರು ಕೆಲವು ಪರಿಣಾಮಕಾರಿ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಜಂಟಿಯಾಗಿ ಮಾಡುತ್ತಾರೆ. ವೈಯಕ್ತಿಕವಾಗಿ ಮಾಡಲಾಗದ ಕೆಲವು ಕಾರ್ಯಕ್ರಮಗಳನ್ನು ಸಂಯುಕ್ತವಾಗಿ ಮಾಡಬಹುದು. ಇದರಿಂದ ಉತ್ತಮ ಶಿಕ್ಷಕರಿಂದ ಹಿಡಿದು ಎಲ್ಲ ಶ್ರೇಷ್ಠ ಸೌಲಭ್ಯಗಳು ಎಲ್ಲ ಶಾಲೆಗಳಿಗೆ ಪ್ರಾಪ್ತವಾಗುತ್ತವೆ. ಈ ಪ್ರಕಾರದ ವ್ಯವಸ್ಥೆಯನ್ನು ಸರಕಾರದ ಸಹಕಾರದಲ್ಲಿ ಮಾಡಬಹುದಾಗಿದೆ ಆದ್ದರಿಂದ ಈ ಪ್ರಕಾರದ ವ್ಯವಸ್ಥೆಯನ್ನು ಮಾಡುವುದರ ಬಗ್ಗೆ ಹೆಚ್ಚು ಒತ್ತು ನೀಡಲಾಯಿತು.

ವಿದ್ಯಾರ್ಥಿಗಳ ಉತ್ತಮ ಪ್ರದರ್ಶನದ ಮೌಲ್ಯಮಾಪನಕ್ಕಾಗಿ ಹಾಗೂ ಅಭಿವೃದ್ಧಿಗಾಗಿ ಇದರಲ್ಲಿ ನಿರಂತರ ಟ್ರೈಕಿಂಗ್ ವ್ಯವಸ್ಥೆಯಿರುತ್ತದೆ. ಇದರಿಂದ ಮಕ್ಕಳ ತಿಳುವಳಿಕೆ ಮಟ್ಟವನ್ನು ನಿರಂತರವಾಗಿ ತಿಳಿಯಬಹುದು. ಇದರಿಂದ ಮಕ್ಕಳು ಟ್ಯೂಷನ್ನಿನ ಮೇಲೆ ಸಾಕಷ್ಟು ಹಣ ಖರ್ಚು ಮಾಡುವುದು ತಪ್ಪುತ್ತದೆ. ವಿಷಯಗಳನ್ನು ಅರ್ಥ ಮಾಡಿಕೊಳ್ಳದೇ ಕಂಠಪಾಠ ಮಾಡಿ ಮನನ ಮಾಡುವ ಬದಲು ವಿಷಯವನ್ನು ತಿಳಿದುಕೊಳ್ಳಲು ಪ್ರಾರಂಭಿಸುತ್ತಾನೆ. ಇದರಿಂದ ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಯಾಗುವುದು. ಇದರಿಂದ ನಾವು ಬಯಸಿದ ಸಮಗ್ರ ಶಿಕ್ಷಣದ, ಗುಣಮಟ್ಟದ ಶಿಕ್ಷಣದ ಕನಸು ನನಸಾಗುತ್ತದೆ. ಇಂತಹ ಅನೇಕ ಉನ್ನತ ವಿಚಾರಗಳು ಇದರಲ್ಲಿ ಅಡಗಿವೆ.

ಮತ್ತೊಂದು ಪ್ರಮುಖ ವಿಚಾರವು ಸಮಾನತೆ, ಅಂತರ್ಗತ ಶಿಕ್ಷಣ, ಹಾಗೂ ಸಂಸ್ಕಾರಯುತ ಶಿಕ್ಷಣಕ್ಕೆ ಸಂಬಂಧಿಸಿದ್ದಾಗಿದೆ. ನಾವು ನೀಡುವ ಶಿಕ್ಷಣವು ಎಲ್ಲರಿಗೂ ಲಭ್ಯವಾಗುತ್ತಿಲ್ಲ. ಕೆಲವರಿಗೆ ಸಿಗುತ್ತಿದೆ ಕಲವರಿಗಿಲ್ಲ, ಕೆಲವರಿಗೆ ಲಾಭವಾಗಿದೆ ಕೆಲವರಿಗಿಲ್ಲ. ಆದ್ದರಿಂದ ಎಲ್ಲರಿಗೂ ಸಮಾನ ರೂಪದಲ್ಲಿ ಗುಣಮಟ್ಟದ ಶಿಕ್ಷಣವು ಪ್ರಾಪ್ತವಾಗುವ ಸಮಾನ ಅಧಿಕಾರವು ಸಿಗುವ ವ್ಯವಸ್ಥೆಯಾಗಬೇಕಾಗಿದೆ. ಇದರ ಮೇಲೆ ಹೆಚ್ಚು ಒತ್ತು ನೀಡಲಾಯಿತು. ದೇಶದಲ್ಲಿ ನೆಲೆಸುವ ಪ್ರತಿಯೊಬ್ಬ ವಿದ್ಯಾರ್ಥಿಯು ಉತ್ತಮ ಶಿಕ್ಷಣವನ್ನು, ಸಂಸ್ಕಾರಪೂರ್ಣ ಶಿಕ್ಷಣವನ್ನು ಸಮಾನ ರೂಪದಲ್ಲಿ ಪಡೆಯುವಂತಾಗಬೇಕೆಂಬ ವ್ಯವಸ್ಥೆಯನ್ನು ಈ ನೀತಿಯಲ್ಲಿ ಮಾಡಲಾಗಿದೆ. ಇದರಲ್ಲಿ ಸಾಮಾಜಿಕ–ಆರ್ಥಿಕ ಅನಾನುಕೂಲತೆಗಳಿರುವ ವ್ಯಕ್ತಿ ಅಥವಾ ಸಮೂಹಗಳನ್ನು ಅನ್ಯ ಸಮೂಹಗಳ ಮೂಲಕ ಸಮಾನತೆ, ಕ್ಷಮತೆ ತರುವ ಪ್ರಯತ್ನವಿದೆ. 2030 ರ ವರೆಗೆ ನಾವು ಶೇಕಡಾ 100ರಷ್ಟು ದಾಖಲಾತಿಯನ್ನು ಮಾಡಬಲ್ಲವರಾಗಬೇಕು. ಇದಕ್ಕಾಗಿ ಶಿಕ್ಷಣವು ಸುಲಭವಾಗಬೇಕು, ಸುಲಭವಾಗಿ ಉಪಲಬ್ಧವಾಗಬೇಕು, ಸಮಾನ ಅವಕಾಶಗಳು ಲಭ್ಯವಾಗಬೇಕು ಇಂತಹ ಬಿಂದುಗಳನ್ನು ಈ ಶಿಕ್ಷಣ ನೀತಿಯಲ್ಲಿ ಜೋಡಿಸಲಾಗಿದೆ.

ಇಲ್ಲಿ ನಾವು ಅನೇಕ ಅಸಮಾನತೆಗಳನ್ನು ನೋಡುತ್ತೇವೆ. ಲಿಂಗ ಅಸಮಾನತೆಯಲ್ಲಿ ಪುರುಷರಿಗೆ ಸಿಗುವಷ್ಟು ಅವಕಾಶಗಳು ಮಹಿಳೆಯರಿಗೆ ಸಿಗಲಿಕ್ಕಿಲ್ಲ, ಸಾಂಸ್ಕೃತಿಕ ಹಾಗೂ ಆರ್ಥಿಕ ಅಸಮಾನತೆಯೂ ಇರಬಹುದು. ಪರಿಶಿಷ್ಟ ಜಾತಿಗಳಾಗಿರಬಹುದು, ಪರಿಶಿಷ್ಟ ಪಂಗಡಗಳಿರಬಹುದು, ಇತರೆ ಹಿಂದುಳಿದ ವರ್ಗಗಳಿರಬಹುದು ಇವರು ಆರ್ಥಿಕವಾಗಿ ಹಿಂದುಳಿದಿರಬಹುದು ಅವರು ಈ ಸಮಾನತೆಯ ಲಾಭವನ್ನು ಪಡೆಯುವಲ್ಲಿ ವಂಚಿತರಾಗಿರಬಹುದು. ಭೌಗೋಳಿಕವಾಗಿಯೂ ಅಸಮಾನತೆಗಳಿರಬಹುದು. ಕೆಲವರು ಹಳ್ಳಿಗಳಲ್ಲಿ ವಾಸವಾಗಿದ್ದರೆ, ಕೆಲವರು ದೊಡ್ಡ ನಗರಗಳಲ್ಲಿ ವಾಸವಾಗಿರುತ್ತಾರೆ ಮತ್ತೆ ಕೆಲವರು ಕುಗ್ರಾಮಗಳಲ್ಲಿ ವಾಸವಿರುತ್ತಾರೆ. ಇಂತಹ ಸಂದರ್ಭದಲ್ಲಿ ನಗರ ಪ್ರದೇಶದವರು ಹೆಚ್ಚು ಸೌಲಭ್ಯವನ್ನು ಪಡೆಯುತ್ತಾರೆ. ಚಿಕ್ಕ ಹಳ್ಳಿಗಳಲ್ಲಿರುವವರಿಗೆ ಇದು ಲಭ್ಯವಾಗಲಿಕ್ಕಿಲ್ಲ. ಮಾನಸಿಕ ಅಥವಾ ಶಾರೀರಿಕ ಅಂಗವೈಕಲ್ಯದ ಅಸಮಾನತೆಯೂ ಇರಬಹುದು. ಇದು ಭಿನ್ನತೆಯನ್ನು ಹುಟ್ಟುಹಾಕಬಹುದು. ಕೆಲವು ಬಾರಿ ವಲಸೆ ಹೋಗುವುದರಿಂದಲೂ ಅಸಮಾನತೆ ಎದುರಾಗಿ ಸೌಲಭ್ಯಗಳಿಂದ ವಂಚಿತರಾಗಬಹುದು. ಆದ್ದರಿಂದ ಈ ಎಲ್ಲ ಅಸಮಾನತೆಗಳ ಮೇಲೆ ವಿಶೇಷ ಚಿಂತನ ಮಾಡುವ, ಹೆಚ್ಚು ಗಮನ ಕೊಡುವ ಅಗತ್ಯವಿದೆ.

ಈ ಗುಂಪನ್ನು ನಾವು ವಿಶೇಷ ಅನಾನುಕೂಲಗಳ ಗುಂಪು ಎಂದು ಪರಿಗಣಿಸಿದಾಗ ಈ ಗುಂಪಿಗೆ ಸಕಲ ಸೌಲಭ್ಯಗಳನ್ನು, ಹೆಚ್ಚಿನ ಶಿಷ್ಯವೇತನವನ್ನು, ಹಣದ ನೇರ ವರ್ಗಾವಣೆ ಮಾಡುವ ಕಾರ್ಯಗಳಾಗಬೇಕು. ಇವರಿಗಾಗಿ ಪರ್ಯಾಯ ಶಾಲೆಗಳ ವ್ಯವಸ್ಥೆಯಾಗಬೇಕು. ಇವರಿಗಾಗಿ ವಿಶೇಷ ಪ್ರಕಾರದ ಯೋಜನೆಗಳನ್ನು ಜಾರಿಗೆ ತರಬಹುದು. ಇದೆಲ್ಲದರ ಮೂಲ ಉದ್ದೇಶವು ಎಲ್ಲರಿಗೂ ಸಮಾನ ಹಾಗೂ ಗುಣಮಟ್ಟದ ಶಿಕ್ಷಣ ಲಭಿಸುವುದೇ ಆಗಿದೆ. ಸಮಾನ ಶಿಕ್ಷಣ ಪಡೆಯಲು ಸೂಚನಾ ಮಾಧ್ಯಮಗಳ ಉಪಯೋಗವಾಗಬೇಕು.

ಸಂಶೋಧನೆಗಳ ಪ್ರಕಾರ ಒಂದು ಮಗುವು ತನ್ನ ಮಾತೃಭಾಷೆಯಲ್ಲಿ ಅತ್ಯಂತ ಆನಂದಭರಿತವಾಗಿ ಶಿಕ್ಷಣ ಪಡೆಯಲು ಬಯಸುತ್ತದೆ. ಸುಲಭವಾಗಿ ಗ್ರಹಿಸುತ್ತದೆ ಹಾಗೂ ಜ್ಞಾನವು ಹೆಚ್ಚುತ್ತದೆ. ಆದ್ದರಿಂದ 5ನೇ ತರಗತಿಯ ವರೆಗೆ ಶಿಕ್ಷಣವು ಮಾತೃಭಾಷೆಯಲ್ಲಿ ಅಥವಾ ಸ್ಥಾನಿಕ ಭಾಷೆಯಲ್ಲಿಯೇ

ಪುಟ 9 ಕ್ಕೆ ➢

➤ ಪುಟ 9 ರಿಂದ.....

ದೊರೆಯಬೇಕು. ಇಲ್ಲಿ ಭಾಷೆಯ ಪ್ರಶ್ನೆಯು ಉದ್ಭವಿಸುವುದಿಲ್ಲ, ಬೋಧನಾ ಮಾಧ್ಯಮದ ಮೇಲೆ ಒತ್ತು ನೀಡಲಾಗಿದೆ. ಇಲ್ಲಿಯವರೆಗೆ ಕಂಠಪಾಠ ಮಾಡಿ ವಿಷಯ ಗ್ರಹಿಸುವುದನ್ನು ಮಗುವು ಬಿಡಬೇಕು. ಈ ವಿಕಲ್ಪವು 8ನೇ ತರಗತಿ ಹಾಗೂ ಉನ್ನತ ಶಿಕ್ಷಣದವರೆಗೂ ಸಿಗುವಂತಾಗಬೇಕು. ಇದರೊಂದಿಗೆ ತ್ರಿಭಾಷಾ ಸೂತ್ರವು ಜಾರಿಯಲ್ಲಿರುತ್ತದೆ. ಇದರಲ್ಲಿ ಎರಡು ಭಾಷೆಗಳು ಭಾರತೀಯ ಭಾಷೆಗಳಾಗಿರಬೇಕು (22 ಭಾಷೆಗಳಲ್ಲಿನ ಯಾವುದಾದರೂ) ಮತ್ತು ಮೂರನೇಯ ಭಾಷೆಯು ಯಾವುದಾದರೂ ಭಾಷೆಯಾಗಿರ ಬಹುದಾಗಿದೆ. ರಾಜ್ಯಗಳು ತಮಗೆ ಇಷ್ಟವಿರುವ ಯಾವುದೇ ಭಾಷೆಗಳನ್ನು ಆಯ್ಕೆಮಾಡಿಕೊಳ್ಳಬಹುದು. ಈ ಶಿಕ್ಷಣ ನೀತಿಯಿಂದ ಆಗುವ ಮತ್ತೊಂದು ಉಪಯೋಗವೆಂದರೆ ಶ್ರೀಮಂತ–ಬಡವ, ಶಿಕ್ಷಿತ–ಅಶಿಕ್ಷಿತ ಪಾಲಕರ ಮಕ್ಕಳು ಉತ್ತಮ ಶಾಲೆಗಳಲ್ಲಿ ಓದಲಾಗುತ್ತಿರಲಿಲ್ಲ. ಕೂಲಿ ಕಾರ್ಮಿಕರ, ರೈತರ ಮಕ್ಕಳು ಹೆಚ್ಚಿನ ಶುಲ್ಕದಿಂದಾಗಿ ಉತ್ತಮ ಶಾಲೆಗಳಿಗೆ ಹೋಗಲಾಗುತ್ತಿರಲಿಲ್ಲ. ಈ ಎಲ್ಲ ಅಸಮಾನತೆಗಳೂ ಬಗೆಹರಿದು ಅವರೂ ಲಾಭವನ್ನು ಪಡೆಯುವಂತಾಗುತ್ತದೆ. ಶಾಲೆಬಿಟ್ಟ ಮಕ್ಕಳ ಸಮಸ್ಯೆಯೂ ಒಂದು ದೊಡ್ಡ ಸಮಸ್ಯೆಯಾಗಿದೆ. 2017ರಲ್ಲಿ ಶಾಲೆಬಿಟ್ಟ ಮಕ್ಕಳ ಸಂಖ್ಯೆಯು 3.22 ಕೋಟಿಯಷ್ಟಿತ್ತು. ಒಂದೇ ವರ್ಷದಲ್ಲಿ 6ರಿಂದ 17 ವರ್ಷದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆ ಬಿಟ್ಟರು. ಆದರೆ ಶಾಲೆಬಿಟ್ಟ ಮಕ್ಕಳು ಇರಲೇಬಾರದೆಂದು ಒತ್ತಡ ಹೇರಲಾಯಿತು. ಈಗ 2030ರ ವರೆಗೆ ನಾವು ಶೇಕಡಾ 100ರಷ್ಟು ದಾಖಲಾತಿ ಮಾಡುತ್ತೇವೆಂದು ಅಂದುಕೊಂಡಿದ್ದರೆ ಈ ಶಾಲೆ ಬಿಟ್ಟ ಮಕ್ಕಳ ಸಂಖ್ಯೆಯು ಕಡಿಮೆಯಗುತ್ತಾ ಹೋಗಬೇಕು ಸಂಪೂರ್ಣ ನಿಲ್ಲಬೇಕು. ಇದಕ್ಕಾಗಿ ಆನಂದದಾಯಕ ಶಿಕ್ಷಣ ನೀಡುವುದು, ಪಠ್ಯಕ್ರಮವನ್ನು ಆನಂದದಾಯಕವಾಗಿಸುವುದು ಮತ್ತು ಆಸಕ್ತಿದಾಯಕವಾಗಿಸುವ ಕೆಲಸ ಮಾಡಲಾಗಿದೆ. ಜೊತೆಗೆ ನಮ್ಮ ಬಿಸಿ ಊಟದ ವ್ಯವಸ್ಥೆಯನ್ನು ಸುಧಾರಿಸ ಬೇಕಾಗಿದೆ, ಹೆಚ್ಚು ವೃತ್ತಿಪರಗೊಳಿಸಬೇಕಾಗಿದೆ ಹಾಗೂ ಉತ್ತಮ ಗೊಳಿಸಬೇಕಾಗಿದೆ. ಖಾಸಗಿ ಸಂಸ್ಥೆಯಡಿಯಲ್ಲಿ ನಡೆಯುವ ಶಾಲೆಗಳಲ್ಲೂ ಕೂಡ ಸಂಸ್ಥೆಯ ಅಥವಾ NGOಗಳ ಸಹಕಾರದಿಂದ ಬಿಸಿ ಊಟದ ವ್ಯವಸ್ಥೆಯಾಗಬೇಕಾಗಿದೆ ಎಂದು ಶಿಫಾರಸು ಮಾಡಲಾಗಿದೆ. ಮಧ್ಯಾಹ್ನದ ಬಿಸಿ ಊಟದ ಜೊತೆಗೆ ಬೆಳಗಿನ ಉಪಹಾರವನ್ನೂ ಕೊಡುವ ಚಿಂತನೆ ಮಾಡಲಾಗಿದೆ.

ಇನ್ನೊಂದು ಪ್ರಮುಖ ಅಂಶವೆಂದರೆ ಶಿಕ್ಷಕರು ಹೆಚ್ಚು ಗೌರವಿಸಲ್ಪಡಬೇಕು ಅವರು ಹೆಚ್ಚು ಸನ್ಮಾನಿತರಾಗಬೇಕು ಮತ್ತು ಅವರಿಗೆ ಬೆಲೆಕೊಡುವಂತಾಗಬೇಕು. ಅವರು ಹೆಚ್ಚು ಸಶಕ್ತರಾಗಬೇಕು. ಶಿಕ್ಷಕರನ್ನು ಹೆಚ್ಚು ಸಾಮರ್ಥ್ಯರನ್ನಾಗಿ ಮಾಡಬೇಕಾಗಿದೆ. ನಮ್ಮ ಸಮಾಜ, ನಮ್ಮ ದೇಶ, ನಮ್ಮ ಸರಕಾರವು ಶಿಕ್ಷಕರಿಗೆ ಗುರುವಿನ ಗೌರವವನ್ನು ಕೊಡಬೇಕೆಂಬ ಅಂಶವನ್ನು ಇದರಲ್ಲಿ ಸೇರಿಸಲಾಗಿದೆ. ಶಿಕ್ಷಕರನ್ನು ಅನಾವಶ್ಯಕವಾಗಿ ವರ್ಗಾವಣೆ ಮಾಡಬಾರದು. ಉತ್ತಮ ಶಿಕ್ಷಕರಿಗೆ ಬಡ್ತಿ ನೀಡಬೇಕು. ಫಾಸ್ಟ್ ಟ್ರ್ಯಾಕ್ ಪ್ರಮೋಷನ್ನಿನ ಯೋಜನೆಗಳಿರಬೇಕು. ಅವರ ಸೇವಾ ಪರಿಸ್ಥಿತಿಗಳು ಸುಧಾರಿಸಬೇಕು. ಅವರಿಗಾಗಿ ಉತ್ತಮ ಕೊಡುಗೆಗಳಿರಬೇಕು. ಅತಿಥಿ ಶಿಕ್ಷಕರ ಬದಲಾಗಿ ಶಾಶ್ವತ ಶಿಕ್ಷಕರನ್ನು ನೇಮಿಸಿಕೊಳ್ಳಬೇಕಾಗಿದೆ. 2030 ರಲ್ಲಿ ಅಂಗನವಾಡಿಯಿಂದ ಹಿಡಿದು 12ನೇ ತರಗತಿಯವರೆಗೆ ಎಲ್ಲ ಶಿಕ್ಷಕರು 4ವರ್ಷಗಳ ಡಿಗ್ರಿಯನ್ನು ಪಾಸುಮಾಡಿದವರೇ ಆಗಿರುತ್ತಾರೆ. 4ವರ್ಷಗಳ ಡಿಗ್ರಿಯನ್ನು ಮುಗಿಸದವರು ಶಿಕ್ಷಕರಾಗಲು ಅರ್ಹರಾಗಿರುವುದಿಲ್ಲ. ಎಲ್ಲ ಹಂತದ ಮಕ್ಕಳಿಗೂ ಉತ್ತಮ ಶಿಕ್ಷಿತ ಶಿಕ್ಷಿತರೇ ಲಭ್ಯವಾಗುವುದು ಇದರ ಉದ್ದೇಶವಾಗಿದೆ. ಶಿಕ್ಷಕರ ನಿರಂತರ ವೃತ್ತಿ ಅಭಿವೃದ್ಧಿಯನ್ನು ಮಾಡಬೇಕಾಗಿದೆ.

●

# ರಾಷ್ಟ್ರೀಯ ಶಿಕ್ಷಣ ನೀತಿ 2020 ವಿಚಾರ ಗೋಷ್ಠಿ

## –: ಬೆಂಗಳೂರು ಉತ್ತರ ಜಿಲ್ಲೆ :–

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ), ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ದಿ: 19–09–2020 ರಂದು ರಾಷ್ಟ್ರೀಯ ಶಿಕ್ಷಣ ನೀತಿ –2020ರ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಬೆಂಗಳೂರು ಉತ್ತರ ವಲಯ–1 ರ ಅಧ್ಯಕ್ಷರಾದ ಶ್ರೀ ನಾರಾಯಣ ಭಟ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ವಿಚಾರ ಸಂಕಿರಣದ ಉಪನ್ಯಾಸಕರು, ಶಿಕ್ಷಣ ತಜ್ಞರು, ಎಮ್.ಇ.ಎಸ್ ಶಿಕ್ಷಕರ ಕಾಲೇಜಿನ ನಿಕಟ ಪೂರ್ವ ಪ್ರಾಂಶುಪಾಲರಾದ ಡಾ.ಹೆಚ್.ಎಸ್.ಗಣೇಶ ಭಟ್ಟರವರ ಪರಿಚಯ ಮತ್ತು ಸ್ವಾಗತವನ್ನು ಬೆಂಗಳೂರು ಉತ್ತರ ವಲಯ –3 ರ ಕಾರ್ಯದರ್ಶಿಯವರಾದ ಶ್ರೀ ಎಂ.ವಿ.ಗಂಗಾಧರ ರವರು ನಡೆಸಿಕೊಟ್ಟರು. ಮಾಧ್ಯಮಿಕ ಶಿಕ್ಷಕ ಸಂಘ ಬೆಳೆದು ಬಂದ ಹಾದಿ, ಪ್ರತಿ ಶೈಕ್ಷಣಿಕ ವರ್ಷದಲ್ಲಿ ಸಂಘದ ಮೂಲಕ ಕೈಗೊಳ್ಳುವ ಕಾರ್ಯಕ್ರಮಗಳ ವಿವರಗಳನ್ನು ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಂ.ಜೋಷಿಯವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದರು. ಡಾ.ಹೆಚ್.ಎಸ್.ಗಣೇಶ ಭಟ್ಟರು ರಾಷ್ಟ್ರೀಯ ಶಿಕ್ಷಣ ನೀತಿ–2020 ಬೆಳೆದು ಬಂದ ರೀತಿಯಿಂದ ಇಂದಿನ ಶಿಕ್ಷಕರು ವೈಜ್ಞಾನಿಕವಾಗಿ ಹೇಗೆ ತೊಡಗಿಸಿಕೊಳ್ಳಬೇಕೆಂದು ಮನಮುಟ್ಟುವಂತೆ ತಿಳಿಸಿದರು. ವಿಚಾರ ಸಂಕಿರಣದಲ್ಲಿ ಶಿಕ್ಷಕರು ಭಾಗವಹಿಸಿ ಉತ್ತಮ ಪ್ರೋತ್ಸಾಹವನ್ನು ನೀಡಿದರು. ಅನೇಕ ಶಿಕ್ಷಕರು ಹೊಸ ಶಿಕ್ಷಣ ನೀತಿಯ ಬಗ್ಗೆ ತಮಗಿರುವ ಸಂದೇಹಗಳನ್ನು ಪ್ರಶ್ನೆಗಳ ಮೂಲಕ ಪರಿಹರಿಸಿಕೊಂಡರು. ಬೆಂಗಳೂರು ವಿಭಾಗ ಪ್ರಮುಖರಾದ ಶ್ರೀ ಮಲ್ಲಿಕಾರ್ಜುನ ಕೂಡಗಿರವರು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಯವರಾದ ಶ್ರೀ ಗಂಗಪ್ಪರವರು ನಿರ್ವಹಿಸಿದರು.

ವರದಿ: **ಎಂ.ವಿ.ಗಂಗಾಧರ ಕಾರ್ಯದರ್ಶಿ,** ಕ.ರಾ.ಮಾ.ಶಿ.ಸಂ

## –: ಬಾಗಲಕೋಟೆ :–

ರೋಟರಿ ಕ್ಲಬ್ ಬಾಗಲಕೋಟೆ ಸಂಸ್ಥೆಯ ವತಿಯಿಂದ ಶಿಕ್ಷಕರಿಗಾಗಿ "ರಾಷ್ಟ್ರೀಯ ಶಿಕ್ಷಣ ನೀತಿ 2020" ವಿಷಯದ ಕುರಿತು ಒಂದು ದಿನದ ಕಾರ್ಯಾಗಾರ ಜರುಗಿತು. ರಾಷ್ಟ್ರೀಯ ಶಿಕ್ಷಣ ನೀತಿ–2020 ವಿಷಯದ ಪ್ರಾಸ್ತಾವಿಕ ನುಡಿಯನ್ನು ಶ್ರೀ ರಘುನಂದನ, ದಕ್ಷಿಣ ಮಧ್ಯ ಕ್ಷೇತ್ರ ಸಂಯೋಜಕರು, ಪ್ರಜ್ಞಾ ಪ್ರವಾಹ, (ಕರ್ನಾಟಕ, ಆಂಧ್ರ ಮತ್ತು ತೆಲಂಗಾಣ) ಇವರು ಮಾತನಾಡಿದರು. ಕಾರ್ಯಾಗಾರದಲ್ಲಿ ವಿಷಯ ಮಂಡನೆ, ಸಂವಾದ ಹಾಗೂ ಸಮಾರೋಪದ ಅವಧಿಯಲ್ಲಿ ವಿವರವಾದ ಮಾಹಿತಿಯನ್ನು ಶಿಕ್ಷಕರಿಗೆ ತಲುಪಿಸುವ ಕಾರ್ಯ ಶ್ಲಾಘನೀಯ. ರೋಟರಿ ಕ್ಲಬ್‌ನ ಅಧ್ಯಕ್ಷರಾದ ಶ್ರೀ ಸಿ.ಎಚ್.ಕಟಗೇರಿ, ರೋಟರಿ ಕ್ಲಬ್ ಅಸಿಸ್ಟೆಂಟ್ ಗವರ್ನರ್ ಪ್ರೊ. ರವಿ ಪಾಟೀಲ, ಪ್ರಜ್ಞಾ ಪ್ರವಾಹದ ಪ್ರಮುಖರು ಹಾಗೂ ಶಿಕ್ಷಕರಾದ ಶ್ರೀ ಮೋಹನ ದೇಶಪಾಂಡೆ, ಸಾಹಿತಿಗಳಾದ ಪ್ರೊ. ಜೆ.ಕೆ.ತಳವಾರ ಹಾಗೂ ಬಾಗಲಕೋಟೆ ಜಿಲ್ಲೆಯ ಶಿಕ್ಷಕರು ಉಪನ್ಯಾಸ ಮತ್ತು ಸಂವಾದದಲ್ಲಿ ಭಾಗವಹಿಸಿದ್ದರು.

## –: ಜಿಲ್ಲಾ ಘಟಕ ಬಾಗಲಕೋಟೆ :–

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) ಜಿಲ್ಲಾ ಘಟಕ ಬಾಗಲಕೋಟೆ ನೆರವೇರಿಸಿದ ರಾಷ್ಟ್ರೀಯ ಶಿಕ್ಷಣ ನೀತಿ 2020 ಕಾರ್ಯಾಗಾರದಲ್ಲಿ ಮುಖ್ಯ ಉಪನ್ಯಾಸಕರಾಗಿ ಸನ್ಮಾನ್ಯ ಶ್ರೀ ಅರುಣ್ ಶಹಾಪುರ ಜೀ ವಿಧಾನ ಪರಿಷತ್ ಸದಸ್ಯರು ಭಾಗವಹಿಸಿದರು. ಸಂಘದ ರಾಜ್ಯ ಪ್ರಕಾಶನ ಪ್ರಕೋಷ್ಠರಾದ ಶ್ರೀ ಜಿ. ಕೆ. ತಳವಾರ, ರಾಜ್ಯ ಶಿಕ್ಷಾಪ್ರಕೋಷ್ಠರಾದ ಶ್ರೀ ದಯಾನಂದ ಶಿಕ್ಕೇರಿ, ಜಿಲ್ಲಾಧ್ಯಕ್ಷರಾದ ಶ್ರೀ ಆರ್. ಜಿ. ಸನ್ನಿ ಹಾಗೂ ಜಿಲ್ಲೆಯ ವಿವಿಧ ತಾಲ್ಲೂಕಿನ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

●

➢ ಪುಟ 3 ರಿಂದ.....

ಪೂರ್ವ ಪಶ್ಚಿಮ, ದಕ್ಷಿಣ, ಉತ್ತರದ ಎಲ್ಲ ಭಾಗಗಳನ್ನು ಸುತ್ತಿ ಜನಮಾನಸದ ಸ್ಥಿತಿಗತಿಗಳನ್ನು ಅರಿತರು. ಫೆಬ್ರವರಿ 1915ರಲ್ಲಿ ತಮ್ಮ ಗುರು ಗೋಖಲೆಯವರ ನಿಧನದ ಸುದ್ದಿ ತಿಳಿದ ಗಾಂಧಿ, ಅವರ ಸ್ಮರಣೆಗಾಗಿ ಬರಿಗಾಲಿನಲ್ಲಿ ನಡೆಯುವ ವ್ರತ ಸ್ವೀಕರಿಸಿದರು. ಬಡವರ ದುಃಸ್ಥಿತಿಯನ್ನು ಕಣ್ಣಾರೆ ಕಂಡು ಜೀವನ ಪೂರ್ತಿ ಮಿತಾಹಾರ ಹಾಗೂ ತುಂಡು ಬಟ್ಟೆ ಉಡುವ ಸಂಕಲ್ಪ ಮಾಡಿದರು.

ಗಾಂಧೀಜಿ 1921ರಿಂದ 26 ವರ್ಷಗಳ ಕಾಲ ಭಾರತ ರಾಜಕಾರಣದ ಮೂಂಚೂಣೆಯಲ್ಲಿದ್ದರು. ಅವರ ಜೀವನದ ಹಲವು ಸಿದ್ಧಾಂತಗಳನ್ನು ಗಮನಿಸೋಣ.

**1. ಸರಳತೆ :** ಗಾಂಧಿಯವರನ್ನು ಭಾರತದ ಕೋಟಿಕೋಟಿ ಜನ ಆರಾಧಿಸಿದ್ದು ಅವರ ವಿಚಾರದಿಂದಲೇ. ಸರಳತೆ ಅವರ ಜೀವನವ್ರತವಾಗಿತ್ತು. ಒಮ್ಮೆ ಮದ್ರಾಸ್ ರಾಜ್ಯದ ಪ್ರವಾಸ ಮಾಡುತ್ತ ನದೀ ತೀರದಲ್ಲಿ ರೈಲು ನಿಂತಾಗ ಹೆಣ್ಣು ಮಗಳೊಬ್ಬಳು ತನ್ನ ತುಂಡು ಸೀರೆಯನ್ನು ಒಗೆಯುವ ದೃಶ್ಯ ನೋಡಿದ ಗಾಂಧೀಜಿ ಈ ದೇಶದ ಜನಕ್ಕೆ ಮೈಪೂರ್ತಿ ಮುಚ್ಚಲು ಬಟ್ಟೆ ಇಲ್ಲದಾಗ ನಾನು ಪಂಚೆ ಶರಟನ್ನು ಧರಿಸುವುದು ಪಾಪ ಎಂದು ತಿಳಿದು ಜೀವನ ಪೂರ್ತಿ ತುಂಡು ಮುಂಡನ್ನೇ ಮಾತ್ರ ಧರಿಸುವ ಸಂಕಲ್ಪ ಮಾಡಿದರು. ದುಂಡು ಮೇಜಿನ ಪರಿಷತ್ತಿಗಾಗಿ ಲಂಡನ್‌ಗೆ ತೆರಳಿದಾಗಲೂ ಅದೇ ತುಂಡುಪಂಚೆ ಮತ್ತು ಚಳಿಗಾಗಿ ಶಾಲನ್ನು ಹೊದ್ದು ಸಭೆಯಲ್ಲಿ ಭಾಗವಹಿಸಿದ್ದರು. ಭಗವದ್ಗೀತೆಯಲ್ಲಿನ ಅಪರಿಗ್ರಹ, ಕರ್ಮಯೋಗ ಅವರಿಗೆ ಅಚ್ಚುಮೆಚ್ಚಿನದಾಗಿತ್ತು. ಅವರ ದಿನಚರಿಯಲ್ಲಿ ಬೆಳಗಿನ ಹಾಗೂ ಸಂಜೆಯ ಪ್ರಾರ್ಥನೆ ಅನಿವಾರ್ಯವಾಗಿತ್ತು. ಅವರ ಈ ಸಂತನಂತಹ ಬದುಕೇ ಅವರನ್ನು ಜನ ಮೆಚ್ಚಲು ಕಾರಣ. ಇಂದಿನ ಉಪಭೋಗ ಜೀವನ ಪದ್ಧತಿಯಲ್ಲಿ, ಇರುವವರು– ಇಲ್ಲದವರ ನಡುವಿನ ಅಂತರ ಹೆಚ್ಚಾಗುತ್ತಿದೆ. ಪ್ರಕೃತಿ ನನ್ನ ಉಪಭೋಗಕ್ಕೆ ಇರುವುದು ಎಂದು ಭಾವಿಸುವುದರಿಂದ ಪರ್ಯಾವರಣ ಕಲುಷಿತಗೊಂಡು ಅದರ ಸಂಕಟವನ್ನು ಅನುಭವಿಸುತ್ತಿದ್ದೇವೆ. ಇಂತಹ ಸಮಯದಲ್ಲಿ ಗಾಂಧೀಜಿಯವರ Earth has enough for human needs but not for human Greed's ಎಂಬ ಮಾತು ಮತ್ತೆ ಅವರ ಸರಳ ಜೀವನ ಮಂತ್ರ ನಮಗೆ ದಾರಿದೀಪ.

**2. ಸರ್ವಧರ್ಮ ಸಮಭಾವ :** ನಿನ್ನ ಧರ್ಮದ ನೆಲೆಯಲ್ಲಿ ಗಟ್ಟಿಯಾಗಿ ನಿಂತು ಎಲ್ಲ ಮತಪಂಥಗಳನ್ನು ಗೌರವಿಸು ಎಂಬುದೂ ಹಿಂದೂ ವಿಚಾರವೇ. "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬ ಉಪನಿಷದ್ ವಾಕ್ಯ ಗಾಂಧಿಯವರಿಗೆ ಪ್ರಿಯವಾಗಿತ್ತು. ಅವರ ಆಶ್ರಮ ಪ್ರಾರ್ಥನೆಯಲ್ಲಿ ಸರ್ವಧರ್ಮದ ಉತ್ತಮ ವಿಚಾರಗಳು ಇರುತ್ತಿದ್ದವು. ಪರಸ್ಪರ ಸಹನೆ, ನಂಬಿಕೆ, ಸಹಬಾಳ್ವೆ ಎಂದಿಗಿಂತ ಇಂದು ಅಗತ್ಯವಾಗಿ ಬೇಕಾಗಿದೆ. ಜಗತ್ತಿನ ಕೆಲವು ದೇಶಗಳು ನನ್ನ ದೇಶವೇ ಹೆಚ್ಚು, ನನ್ನ ವಿಚಾರವನ್ನೇ ಮೆಚ್ಚು. My way is high way ಎಂಬ ಧೋರಣೆಯಿಂದ ಬೇಯುತ್ತಿದೆ. ಇಲ್ಲೀಗ ನಮಗೆ ಗಾಂಧಿಯವರ ಜಗತ್ತೇ ಒಂದು ಕುಟುಂಬ ಎಂಬ ಹಿಂದೂ ವಿಚಾರದ ಪ್ರಸ್ತುತತೆ ಅರಿವಿಗೆ ಬರುವುದು.

**3. ಗ್ರಾಮ ಸ್ವರಾಜ್ಯ :** ಗಾಂಧೀಜಿಯವರ ವಿಚಾರದಲ್ಲಿ ನಮ್ಮ ಸಾಮಾಜಿಕ, ಆರ್ಥಿಕ ವ್ಯವಸ್ಥೆಯು 'ಗ್ರಾಮಕೇಂದ್ರಿತ'ವಾಗಿತ್ತು. ಗಾಂಧೀಜಿ "Back to village" ಎಂದರು. ಅವರ ಅನುಯಾಯಿಗಳು ಹಳ್ಳಿಗಳಿಗೆ ಬೆನ್ನು ತೋರಿಸಿ 'ನಗರ ಕೇಂದ್ರಿತ ವ್ಯವಸ್ಥೆಗೆ ಜೋತುಬಿದ್ದರು. ಪರಿಣಾಮ ಶುದ್ಧ ಹವೆ, ಶುದ್ಧ ನೀರು, ಸ್ವಸ್ಥ ಮನಸ್ಸುಗಳ ಕೊರತೆ. ಗೃಹ ಕೈಗಾರಿಕೆ ಮೂಲಗುಂಪಾಗಿ Mass Production ನಿಂದ ಲಕ್ಷಾಂತರ ಕೈಗಳಿಗೆ ಕೆಲಸವಿಲ್ಲವಾಗಿದೆ. ಗಾಂಧೀಜಿಯವರ ಗುಡಿ ಕೈಗಾರಿಕೆಯ ಗಡಿದಾಟಿ ನಾವು ಬಹಳ ಮುಂದೆ ಬಂದಿದ್ದೇವೆ. ಈಗ ಬಂದಿರುವ ಕರೋನ ನಮ್ಮನ್ನು ಮತ್ತೆ ಹಳ್ಳಿಗಳ ಕಡೆ ಮುಖ ಮಾಡುವಂತೆ ಮಾಡಿದೆ.

**4. ಸ್ವದೇಶಿ :** ಗಾಂಧೀಜಿಯವರ ಸ್ವದೇಶಿ ಕೇವಲ ಉಡುಪಿಗೆ ಸೀಮಿತವಾಗಿರಲಿಲ್ಲ. ಅದು ಜೀವನದ ಎಲ್ಲ ಮುಖಗಳನ್ನು ಒಳಗೊಂಡಿತ್ತು. ಪ್ರಮುಖವಾಗಿ ನಮ್ಮ ಶಿಕ್ಷಣ ಪದ್ಧತಿ. ನಮ್ಮ ಶಿಕ್ಷಣ ಮಾತೃ ಭಾಷೆಯಲ್ಲಿ ನಡೆಯಬೇಕೆಂದು ಅವರು ಪದೇ ಪದೇ ಹೇಳುತ್ತಿದ್ದರು. ನಾವು ಪರಭಾಷೆಗೆ ಜೋತುಬಿದ್ದೆವು. ಕೈಗಳಿಗೆ ಕೆಲಸ ಕೊಡುವ ಶಿಕ್ಷಣವೆಂದರು. ನಾವು ಕೇವಲ ಪೆನ್ನು ಕೊಡುವ ಕಾರಕೋನ ಶಿಕ್ಷಣ ನೀಡಿದೆವು. 73 ವರ್ಷಗಳ ನಂತರ ಈಗ ಓಇಕ ಬಂದು ಅವರ ಕನಸಿನ ಶಿಕ್ಷಣ ನನಸಾಗುತ್ತಿದೆ. ವಿದೇಶೀ ವಸ್ತುಗಳ ಮೋಹ ಕವಿದ ನಮಗೆ ಕರೋನಾ ಕಾರಣದಿಂದ ಚೀನಾವಸ್ತುಗಳ ಬಹಿಷ್ಕಾರ ಮಾಡಿ ಸ್ವದೇಶೀ ವಸ್ತುಗಳತ್ತ ಮುಖ ಮಾಡುವ ಅಗತ್ಯವನ್ನುಂಟುಮಾಡಿದೆ. ಚೀನೀ ವಸ್ತುಗಳ ಬಹಿಷ್ಕಾರ ಪ್ರಾರಂಭ ಮಾತ್ರ ಮತ್ತೆ ಸ್ವಚ್ಛತೆ, ಸ್ವದೇಶೀ ಮುಂತಾದ ಗಾಂಧೀ ವಿಚಾರಕ್ಕೆ ಮರಳುವ ಕಾಲ ಹತ್ತಿರವಾಗುತ್ತಿದೆ. ಅವರ ಅನೇಕ ಚಿಂತನೆಗಳು ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತಿದೆ.

ಗಾಂಧೀಜಿಯವರ ಮೂಲ ನಂಬಿಕೆಗಳೆಲ್ಲವೂ ಹಿಂದೂ ಜೀವನ ಪದ್ಧತಿಯ ಮೂಲಾಧಾರದಿಂದಲೇ ಬಂದವುಗಳು ಎಂಬುದನ್ನು ಮರೆಯದಿರೋಣ.

●

➢ ಪುಟ 6 ರಿಂದ.....

ಈ ವಾಕ್ಯವು 'ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿ' ಯ ಸಂವಿಧಾನದಲ್ಲಿ ಅಡಕವಾಗಿದೆ. ಈ ಸಂದೇಶವೇ ನನ್ನ ಜೀವನದ ಮಾರ್ಗದರ್ಶಕ ಸೂತ್ರ. ಈ ಸಂದೇಶದ ಭಾವವೆಂದರೆ 'ರಾಜಕೀಯವನ್ನು ಹಾಗೂ ರಾಜಕೀಯ ಸಂಸ್ಥೆಗಳನ್ನು ಆಧ್ಯಾತ್ಮಮಯವಾಗಿಸುವುದು. ನಾವು ಈ ಕೂಡಲೇ ಇದನ್ನು ವಾಸ್ತವಿಕ ರೂಪಕ್ಕೆ ತರಬೇಕು. ವಿದ್ಯಾರ್ಥಿಗಳು ರಾಜಕೀಯದಿಂದ ದೂರ ಸರಿಯಬಾರದು. ಅದು ನಮ್ಮ ಮತಾಚಾರ (Religion)ದಷ್ಟೇ ಪ್ರಮುಖವಾದುದು. ಮತಾಚಾರದಿಂದ ರಾಜಕೀಯವನ್ನು ಬೇರ್ಪಡಿಸಲಾಗದು. ನನ್ನ ಅಭಿಪ್ರಾಯ ನಿಮಗೆ ಹಿಡಿಸದಿರಬಹುದು ಎಂಬುದು ನನಗೆ ತಿಳಿದಿದೆ. ಆದರೆ ದಕ್ಷಿಣ ಆಫ್ರಿಕಾದ ನನ್ನ ಅನುಭವದಿಂದ ನಾನು ಹೇಳುವುದೇನೆಂದರೆ ಈ ದೇಶದ ಜನ ಆಧುನಿಕತೆಗೆ ಮೈಯೊಡ್ಡದಿರಬಹುದು ಆದರೆ ಅನಾದಿ ಕಾಲದ ಋಷಿತಪಶ್ಶಕ್ತಿಯನ್ನು ಮೈಗೂಡಿಸಿಕೊಂಡಿದ್ದಾರೆ. ಇವರಿಗೆ ಆಧುನಿಕ ನಾಗರೀಕತೆಯ ಅರಿವಾಗಲೀ ಅಥವಾ ಇಂಗ್ಲೀಷ್ ಸಾಹಿತ್ಯದ ಒಂದಕ್ಷರದ ಪರಿಚಯವಾಗಲೀ ಇಲ್ಲದಿದ್ದರೂ ಅವರು ಅಸಾಧಾರಣ ಎತ್ತರಕ್ಕೆ ಏರಬಲ್ಲರು. ದಕ್ಷಿಣ ಆಫ್ರಿಕಾದ ಅನಕ್ಷರಸ್ಥ, ಅವಿದ್ಯಾವಂತರಾದ ನಮ್ಮ ದೇಶಬಾಂಧವರು ಸಾಧಿಸಿದ ಹತ್ತು ಪಟ್ಟಿಗೂ ಅಧಿಕವಾಗಿ ಈ ಪವಿತ್ರ ಭೂಮಿಯಲ್ಲಿ ಸಾಧಿಸಲು ನನಗೂ ನಿಮಗೂ ಸಾಧ್ಯವಿದೆ. ಆ ಭಾಗ್ಯವು ನಿಮ್ಮದೂ, ನನ್ನದೂ ಆಗಿರಲಿ.

[ಈ ಲೇಖನ ದಿನಾಂಕ 15 ಏಪ್ರಿಲ್ 1915 ರಂದು ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಮದ್ರಾಸಿನ ವಿದ್ಯಾರ್ಥಿಗಳನ್ನು ಕುರಿತು ಗಾಂಧೀಜಿಯವರು ಮಾಡಿದ ಭಾಷಣದ ಸಾರಾಂಶ]

●

ಶುದ್ಧ ಮನಸ್ಸನ್ನು ಹೊಂದಿರುವವನು ಎಲ್ಲೆಲ್ಲೂ ಶುದ್ಧವಾದುದನ್ನೇ ಕಾಣುತ್ತಾನೆ – ಶಾರದಾದೇವಿ

# ‘ಸ್ವಾತಂತ್ರ ಹೋರಾಟ–ಹಿನ್ನೋಟ ಮುನ್ನೋಟ’ ಪುಸ್ತಕ ಲೋಕಾರ್ಪಣೆ








ಹುಬ್ಬಳ್ಳಿ : ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಇವರುಗಳ ಜನ್ಮ ದಿನಾಚರಣೆ ಪ್ರಯುಕ್ತ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಡಿ ಶುಕ್ರವಾರ ಹುಬ್ಬಳ್ಳಿಯ ಆರ್.ಎಸ್.ಎಸ್.ನ ಕೇಶವಕುಂಜದಲ್ಲಿ ಹಮ್ಮಿಕೊಂಡಿದ್ದ ಜೇಷ್ಠ ಪ್ರಚಾರಕರಾದ ಸು. ರಾಮಣ್ಣನವರಿಂದ ರಚಿತವಾದ ಸ್ವಾತಂತ್ರ ಹೋರಾಟ ‘ಹಿನ್ನೋಟ ಮುನ್ನೋಟ’ ಪುಸ್ತಕದ ಬಿಡುಗಡೆ ಸಮಾರಂಭ ನೆರವೇರಿತು.

ಜೆಎನ್‌ಯು ವಿಶ್ವವಿದ್ಯಾಲಯ, ನವದೆಹಲಿಯ ಪ್ರಾಧ್ಯಾಪಕರಾದ ಡಾ. ವಿಶ್ವನಾಥ ಸ್ವತಂತ್ರ ಹೋರಾಟ ‘ಹಿನ್ನೋಟ ಮುನ್ನೋಟ’ ಪುಸ್ತಕದ ಪ್ರಮುಖ ಅಂಶಗಳ ಪರಿಚಯ ಮಾಡಿದರು.

ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜಿನ ಕಾರ್ಯದರ್ಶಿಗಳಾದ ಶ್ರೀ ಅನಿಲಕುಮಾರ ಚೌಗಲಾ ಪುಸ್ತಕ ಬಿಡುಗಡೆ ಮಾಡಿ ಮುಂದುವರೆದು ಮಾತನಾಡಿ, ದೇಶಭಕ್ತಿ ಅನ್ನುವುದು ಪ್ರಕಟಿತವಾಗಬೇಕಾದರೆ ಜೀಜಾಬಾಯಿ ಶಿವಾಜಿಗೆ ಶಿಕ್ಷಣ ನೀಡಿದಂತೆ ಶಾಲೆಗಳಲ್ಲಿ ಮಕ್ಕಳಿಗೆ ದೇಶಭಕ್ತಿ ಪ್ರಕಟಿತವಾಗಬೇಕು ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಮಹಾಪುರುಷರ ವಿಷಯವಸ್ತು ಈಗಿನ ಮಕ್ಕಳ ಪಠ್ಯಕ್ರಮದಲ್ಲಿ ಬರುವಂತೆ ಸರ್ಕಾರ ಗಮನಹರಿಸಬೇಕು ಮತ್ತು ಸು. ರಾಮಣ್ಣರವರು 80ನೇ ವಯಸ್ಸಿನಲ್ಲಿ ಬರೆದ ಈ ಪುಸ್ತಕ ಹೊರತರುತ್ತಿರುವುದು ನಮಗೆಲ್ಲಾ ಹೆಮ್ಮೆಯ ವಿಷಯವಾಗಿದೆ ಎಂದು, ರಾಷ್ಟ್ರ, ರಾಷ್ಟ್ರೀಯತೆ, ದೇಶಭಕ್ತಿ ಸ್ವಾತಂತ್ರದ ಕುರಿತು ಹಲವಾರು ವಿಚಾರ ತಿಳಿಸಿದರು.

ಆರ್.ಎಸ್.ಎಸ್ ನ ಜೇಷ್ಠ ಪ್ರಚಾರಕ ಸು.ರಾಮಣ್ಣ ಮುಖ್ಯ ಭಾಷಣಕಾರರಾಗಿ ಮಾತನಾಡಿ, ಪುಸ್ತಕ ರಚನೆಯ ಹಿನ್ನಲೆಯನ್ನು ವಿವರಿಸುತ್ತ, ಭಾರತದ ಸ್ವಾತಂತ್ರಕ್ಕಾಗಿ ಅಗಣಿತ ಹೋರಾಟಗಾರರು ಜೀವ ತೆತ್ತಿರುವ ಬೆಲೆಯನ್ನು ತಿಳಿಯಬೇಕು ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರರ ಜೀವನ ಪರಿಚಯವಾದಾಗ ಮಾತ್ರ ರಾಷ್ಟ್ರವನ್ನು ಉಳಿಸಿ ಬೆಳೆಸುವ ಗಂಭೀರತೆ ಮತ್ತು ಪ್ರೇರಣೆ ಹೊಸ ಪೀಳಿಗೆಗೆ ದೊರೆಯುತ್ತದೆ ಎಂದು ಹೇಳಿದರು.

ನಾವೆಲ್ಲಾ ಹಕ್ಕುಗಳಿಗಾಗಿ ಹೋರಾಡುವವರಾಗಿದ್ದೇವೆಯೇ ಹೊರತು ಕರ್ತವ್ಯಗಳನ್ನು ಮರೆತಿದ್ದೇವೆ, ಕರ್ತವ್ಯ ಮತ್ತು ಧನ್ಯತೆ ನಮ್ಮ ಜೀವನದ ಅವಿಭಾಜ್ಯ ಅಂಗವಾದಾಗ ಮಾತ್ರ ರಾಷ್ಟ್ರ ಮುನ್ನಡೆಯಲು ಸಾಧ್ಯ ಎಂದು ಹೇಳಿದರು.

ಆರ್.ಎಸ್.ಎಸ್‌ನ ಪ್ರಾಂತ ಪ್ರಚಾರಕರಾದ ಶ್ರೀಯುತ ಸುಧಾಕರ, ಆರ್.ಎಸ್.ಎಸ್. ನ ಸಹ ಪ್ರಾಂತ ಪ್ರಚಾರಕರಾದ ಶ್ರೀಯುತ ನರೇಂದ್ರ, ಶ್ರೀ ಗೋವರ್ಧನರಾವ್, ಶ್ರೀ ಸತೀಶ ಮುರೂರ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಸಂದೀಪ ಬೂದಿಹಾಳ ಉಪಸ್ಥಿತರಿದ್ದರು.

ಪುಸ್ತಕ ಬಿಡುಗಡೆಯ ಆನ್ ಲೈನ್‌ನ ಕಾರ್ಯಕ್ರಮದಲ್ಲಿ ಎ.ಬಿ.ಆರ್.ಎಸ್.ಎಮ್. ನ ಸಂರಕ್ಷಕರಾದ ಶ್ರೀಯುತ ಕೃ. ನರಹರಿಯವರು, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರೊ. ಶಿವಾನಂದ ಸಿಂಧನಕೇರಾ, ಶ್ರೀಯುತ ಹೆಚ್ ನಾಗಭೂಷಣ್ ರಾವ್, ಶ್ರೀಯುತ ಕೆ. ಬಾಲಕೃಷ್ಣ ಭಟ್, ಶ್ರೀಯುತ ಅರುಣ ಶಹಾಪೂರ, ಶ್ರೀಯುತ ಚಿದಾನಂದ ಪಾಟೀಲ, ಶ್ರೀಯುತ ಗಂಗಾಧಾರಾಚಾರಿ, ಶ್ರೀಮತಿ ಮಮತಾ ಡಿ.ಕೆ, ಶ್ರೀಮತಿ ಸೀತಾಲಕ್ಷ್ಮಿಯವರು ಹಾಗೂ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪದಾಧಿಕಾರಿಗಳು ಮತ್ತು ಕರ್ನಾಟಕ ರಾಜ್ಯದಿಂದ ಎಲ್ಲಾ ಜಿಲ್ಲೆಗಳ ಶಿಕ್ಷಕ ಬಂಧುಗಳು ಪುಸ್ತಕ ಬಿಡುಗಡೆ ಲೈವ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಅನುಸೂಯಾ ಸಜ್ಜನಶೆಟ್ಟರ ಮತ್ತು ಶ್ರೀಮತಿ ಜ್ಯೋತಿ ಕದಮ ಸರಸ್ವತಿ ವಂದನೆ ಮಾಡಿದರು, ಶ್ರೀ ಸೋಮಶೇಖರ ಒಣರೊಟ್ಟಿ ದೇಶಭಕ್ತಿಗೀತೆ ಹೇಳಿದರು, ಶ್ರೀಧರ ಪಾಟೀಲ ಕುಲಕರ್ಣಿ ಸ್ವಾಗತ ಮತ್ತು ಪರಿಚಯ ಮಾಡಿದರು. ಶಿವಾನಂದ ನಾಗೂರ ವಂದಿಸಿದರು. ಡಾ. ರಾಜಕುಮಾರ ಪಾಟೀಲ ಕಾರ್ಯಕ್ರಮ ನಿರೂಪಿಸಿದರು.

ಲೋಕಾರ್ಪಣೆಯಾದ “ಸ್ವಾತಂತ್ರ ಹೋರಾಟ ‘ಹಿನ್ನೋಟ ಮುನ್ನೋಟ’” ಪುಸ್ತಕವು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಜಿಲ್ಲಾಧ್ಯಕ್ಷರು ಹಾಗೂ ಸಂಘದ ಕೇಂದ್ರ ಕಛೇರಿಯಲ್ಲಿ ಲಭ್ಯವಿದೆ. ಆಸಕ್ತಿಯುಳ್ಳವರು ಪುಸ್ತಕವನ್ನು ಕೊಂಡುಕೊಳ್ಳುವುದು. ಹೆಚ್ಚಿನ ಮಾಹಿತಿಗಾಗಿ ಕ.ರಾ.ಮಾ.ಶಿ.ಸಂಘದ ಅಧ್ಯಕ್ಷರಾದ ಸಂದೀಪ್ ಬೂದಿಹಾಳ್– 9449193705, ಪ್ರಧಾನ ಕಾರ್ಯದರ್ಶಿಗಳು–ಚಿದಾನಂದ್ ಪಾಟೀಲ್–9449114285, ಸಹ ಕಾರ್ಯದರ್ಶಿ–ಗಂಗಾಧರ್–9449512060 ರವರನ್ನು ಸಂಪರ್ಕಿಸುವುದು. ಒಂದು ಪುಸ್ತಕದ ಬೆಲೆ 15 ರೂಪಾಯಿಗಳು.

MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026

Date of Publishing : 17-10-2020 Date of Posting 20th or 21st of every month Posted at Periodical Rate




IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com